ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಒಟ್ಟು ಪ್ರಶ್ನೆಗಳು – ೧೩೭**

**ಪಟ್ಟಿ – ೦೨**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತಾರನೇ ಅಧಿವೇಶನ

**ಬುಧವಾರ, ದಿನಾಂಕ : ೧೦ನೇ ಡಿಸೆಂಬರ್, ೨೦೧೪**

---

## ಸಮೂಹ – III

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

## ಉಪ್ಪು ನೀರು ತಡೆಗೋಡೆ ನಿರ್ಮಾಣ ಕಾಮಗಾರಿಯಲ್ಲಿ ಅಕ್ರಮಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೨೨ (೧೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವರಾಹಿ ಯೋಜನಾ ಪ್ರದೇಶದಲ್ಲಿ ಕರ್ನಾಟಕ ನೀರಾವರಿ ನಿಗಮದಿಂದ ಕುಂದಾಪುರ ತಾಲ್ಲೂಕಿನ ಬಳ್ಕೂರು ಎಂಬಲ್ಲಿ ವರಾಹಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಉಪ್ಪು ನೀರು ತಡೆಗೋಡೆ ಮತ್ತು ಬಸ್ರೂರು ಗ್ರಾಮದ ಹಟ್ಟಿಕುದ್ರುವಿಗೆ ಕುಡಿಯುವ ನೀರು ಸರಬರಾಜು ಮಾಡುವ ಕಾಮಗಾರಿಗೆ ಅಂದಾಜು ಪಟ್ಟಿಯಲ್ಲಿ ನಿಗಧಿ ಮಾಡಲಾದ ಮೊತ್ತವೆಷ್ಟು ಮತ್ತು ಈ ಕಾಮಗಾರಿ ಮುಕ್ತಾಯದ ನಂತರ ಪಾವತಿಸಲಾದ ಮೊತ್ತವೆಷ್ಟು ;

(ಆ) ಬಸ್ರೂರು ಗ್ರಾಮದ ಹಟ್ಟಿಕುದ್ರುವಿಗೆ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿಯನ್ನು ಮಾಡದೆ ಸುಮಾರು ರೂ.೧೦ ಕೋಟಿಗೂ ಹೆಚ್ಚು ಹಣವನ್ನು ಅಕ್ರಮವಾಗಿ ಪಾವತಿ ಮಾಡಿರುವುದು ಇಲಾಖೆಯ ಗಮನಕ್ಕೆ ಬಂದರೂ ಸಹ ಏನು ಕ್ರಮ ಕೈಗೊಳ್ಳದಿರಲು ಕಾರಣವೇನು ?



## ವರಾಹಿ ನೀರಾವರಿ ಯೋಜನೆಯ ಕಾಮಗಾರಿ ಅವ್ಯವಹಾರಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೨೩ (೧೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವರಾಹಿ ನೀರಾವರಿ ಯೋಜನೆಯಲ್ಲಿ ಕಾಲುವೆಗಳನ್ನು ನಿರ್ಮಿಸುವಾಗ ಮೃದು ಕಲ್ಲು ಮತ್ತು ಗಟ್ಟಿ ಕಲ್ಲುಗಳೆಂದು ಬಿಲ್ಲು ಮಾಡಿ ನಂತರ ಅದೇ ಕಾಮಗಾರಿಗೆ ಕಟ್ ಅಂಡ್ ಕವರ್ ಕಾಮಗಾರಿ ಮಾಡಿರುವ ಪ್ರಕರಣಗಳೆಷ್ಟು (ಕಿ.ಮೀ.ವಾರು ಮೃದುಕಲ್ಲು ಮತ್ತು ಗಟ್ಟಿ ಕಲ್ಲುಗಳಿಗೆ ಪಾವತಿಸಿದ ಹೆಚ್ಚುವರಿ ಮೊತ್ತ ಹಾಗೂ ಗುತ್ತಿಗೆದಾರರ ಹೆಸರಿನೊಂದಿಗೆ ವಿವರ ನೀಡುವುದು) ;

(ಆ) ಇಂತಹ ಅವ್ಯವಹಾರಗಳ ಕಾಮಗಾರಿ ಮಾಡಿ ಹಣ ಪಡೆದ ಗುತ್ತಿಗೆದಾರರಿಂದ ಹಣ ವಾಪಸ್ಸು ಪಡೆಯಲು ಕ್ರಮ ಕೈಗೊಳ್ಳಲಾಗಿದೆಯೇ ಇಲ್ಲವಾದಲ್ಲಿ ಕಾರಣವೇನು ?

## ಕೃಷಿ ಹಾಗೂ ಕೃಷಿಯೇತರ ಭೂ ಒತ್ತುವರಿ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೨೪ (೧೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ೫ ವರ್ಷಗಳಲ್ಲಿ ನಡೆದಿರುವ ಸರ್ಕಾರಿ ಕೃಷಿ ಭೂಮಿ ಒತ್ತುವರಿ ಪ್ರಕರಣಗಳೆಷ್ಟು ; ಇವುಗಳಲ್ಲಿ ನಕಲಿ ದಾಖಲೆ

ಸೃಷ್ಟಿಸಿದ ಪ್ರಕರಣಗಳೆಷ್ಟು ; ಮತ್ತು ನಕಲಿ ದಾಖಲೆ ಸೃಷ್ಟಿಸದ ಪ್ರಕರಣಗಳೆಷ್ಟು (ಜಿಲ್ಲಾವಾರು, ವರ್ಷವಾರು, ವಿಸ್ತೀರ್ಣವಾರು, ಪ್ರಕರಣವಾರು ವಿವರ ನೀಡುವುದು) ;

(ಆ) ಕಳೆದ ೫ ವರ್ಷಗಳಲ್ಲಿ ಪಟ್ಟಣ ಪಂಚಾಯತ್, ಪುರಸಭೆ, ನಗರಸಭೆ ಮತ್ತು ಮಹಾನಗರ ಪಾಲಿಕೆಗಳಲ್ಲಿ ಸರ್ಕಾರಿ ಕೃಷಿಯೇತರ ಭೂಮಿ ಒತ್ತುವರಿ ಮಾಡಿರುವ ಪ್ರಕರಣಗಳೆಷ್ಟು (ಸ್ಥಳೀಯ ಸಂಸ್ಥೆವಾರು, ವರ್ಷವಾರು ವಿಸ್ತೀರ್ಣವಾರು, ಪ್ರಕರಣವಾರು ವಿವರ ನೀಡುವುದು) ;

(ಇ) ಇಂತಹ ಅಕ್ರಮಗಳನ್ನು ಮಾಡಿದವರ ಹಾಗೂ ಅದಕ್ಕೆ ಸಹಕರಿಸಿದವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದೇ ; ಮತ್ತು ಅಂತಹ ಭೂಮಿಯನ್ನು ತಕ್ಷಣ ಸರ್ಕಾರ ಸ್ವಾಧೀನಪಡಿಸಿಕೊಳ್ಳುವುದೇ ; ಇಲ್ಲವಾದಲ್ಲಿ ಕಾರಣವೇನು ?

## ಲೋಕಾಯುಕ್ತ ತನಿಖೆಗೆ ಒಳಪಟ್ಟ ಯೋಜನೆಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೨೫ (೧೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ನೀರಾವರಿ ನಿಗಮದಿಂದ ನಿರ್ವಹಿಸಲ್ಪಡುತ್ತಿರುವ ಯಾವ ಯಾವ ಯೋಜನೆಗಳು ಲೋಕಾಯುಕ್ತ ತನಿಖೆಗೆ ಒಳಪಟ್ಟಿವೆ ;

(ಆ) ನಿಗಮದಡಿಯಲ್ಲಿ ಈಗ ಕಾರ್ಯನಿರ್ವಹಿಸುತ್ತಿರುವ ಎಷ್ಟು ಅಭಿಯಂತರರು ಮತ್ತು ಅಧಿಕಾರಿಗಳ ಮೇಲೆ ಹಿಂದೆ ಬೇರೆ, ಬೇರೆ ಪ್ರಕರಣಗಳಲ್ಲಿ ಇಲಾಖಾ ತನಿಖೆ ಕೈಗೊಳ್ಳಲಾಗಿದೆ ಮತ್ತು ಅವುಗಳಿಗಾಗಿರುವ ಶಿಕ್ಷೆಯ ಪ್ರಮಾಣವೆಷ್ಟು (ಪ್ರಕರಣ, ಹೆಸರು, ಹುದ್ದೆ, ಜಿಲ್ಲೆಯೊಂದಿಗೆ ವಿವರ ನೀಡುವುದು) ;



(ಇ) ಈ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭಿಯಂತರರು ಮತ್ತು ಅಧಿಕಾರಿಗಳು ಈಗ ಮತ್ತು ಹಿಂದೆ ಬೇರೆ, ಬೇರೆ ಸಂದರ್ಭಗಳಲ್ಲಿ ಬೇರೆ, ಬೇರೆ ಹುದ್ದೆಯಲ್ಲಿ ಕೆ.ಎ.ಡಿ ಮತ್ತು ನ್ಯಾಯಾಲಯಗಳಿಗೆ ಹೋಗಿರುವ ಪ್ರಕರಣಗಳೆಷ್ಟು ಮತ್ತು ಯಾವುವು (ಸದರಿ ಪ್ರಕರಣಗಳ ಹೆಸರು, ಹುದ್ದೆ, ಜಿಲ್ಲೆಯೊಂದಿಗೆ ವಿವರ ನೀಡುವುದು) ?

## ಅರೆಕಾಲಿಕ ಕ್ರೀಡಾ ತರಬೇತುದಾರರ ಸೇವೆ ಅಕ್ರಮ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) :–**

೧೨೬ (೧೬) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕ್ರೀಡಾ ಪರಿಷತ್ತು ಹಾಗೂ ಕ್ರೀಡಾ ಪ್ರಾಧಿಕಾರದಿಂದ ದಿನಗೂಲಿ/ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡು ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತರಬೇತುದಾರರ ಸಂಖ್ಯೆ ಎಷ್ಟು ;

(ಆ) ಅರೆಕಾಲಿಕ ತರಬೇತುದಾರರು ಎಷ್ಟು ವರ್ಷಗಳಿಂದ ಸಂಚಿತ ವೇತನ ಪಡೆದು ಕಾರ್ಯನಿರ್ವಹಿಸುತ್ತಿದ್ದಾರೆ (ಜಿಲ್ಲಾವಾರು ಮಾಹಿತಿ ನೀಡುವುದು) ;

(ಇ) ಕ್ರೀಡಾ ಪ್ರಾಧಿಕಾರದಲ್ಲಿ ದಿನಗೂಲಿ ನೌಕರರಾಗಿ ನೇಮಕಗೊಂಡ ತರಬೇತುದಾರರು/ಸಿಬ್ಬಂದಿಯನ್ನು ಕ್ರೀಡಾ ಇಲಾಖೆಯ ಸುತ್ತೋಲೆ

ಸಂಖ್ಯೆ: ಕಕ್ರೀಪ್ರಾ:ಸಿ–೩:೧೧/ವಾವೇಭ:೯೭–೯೮, ದಿನಾಂಕ: ೨೭–೦೩–೧೯೯೯ರ ಪ್ರಕಾರ ಸೇವಾ ಸಕ್ರಮಗೊಳಿಸಿ ಖಾಯಂ ಗೊಳಿಸಿದ್ದು ನಿಜವೇ ;

(ಈ) ನಂತರದಲ್ಲಿ ಈ ಸೇವಾ ಸಕ್ರಮವನ್ನು ಹಿಂತೆಗೆದುಕೊಳ್ಳಲು ಕಾರಣವೇನು ;

(ಉ) ಈ ದಿನಗೂಲಿ/ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಸಿಬ್ಬಂದಿಯನ್ನು ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯಲ್ಲಿ ಖಾಯಂಗೊಳಿಸಲು ಸರ್ಕಾರ ಚಿಂತನೆ ನಡೆಸಿದೆಯೇ ?

## ಅತಿವೃಷ್ಠಿ ಮತ್ತು ಅನಾವೃಷ್ಠಿಯಿಂದ ಕೃಷಿ ಬೆಳೆಗೆ ಆದ ಹಾನಿ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೨೭ (೩೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅತಿವೃಷ್ಠಿ ಮತ್ತು ಅನಾವೃಷ್ಠಿಯಿಂದ ರಾಜ್ಯದ ಕೃಷಿ ಬೆಳೆಗೆ ಆದ ಹಾನಿ ಎಷ್ಟು (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು) ;

(ಆ) ಈ ಹಾನಿಗೆ ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ ಬಂದ ಪರಿಹಾರದ ಹಣವೆಷ್ಟು ;

(ಇ) ಈವರೆಗೆ ನೆರೆ ಪರಿಹಾರಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ ?



## ಸಮುದ್ರ ತೀರದಲ್ಲಿ ಉಂಟಾಗುವ ಕಡಲ್ಕೊರೆತ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೨೮ (೩೬) ಮಾನ್ಯ ಜವಳಿ ಹಾಗೂ ಬಂದರು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ಕರ್ನಾಟಕದ ಸಮುದ್ರ ತೀರದಲ್ಲಿ ಪ್ರತಿ ವರ್ಷ ಉಂಟಾಗುವ ಕಡಲ್ಕೊರೆತಕ್ಕೆ ವೈಜ್ಞಾನಿಕ ಕಾರಣಗಳೇನು ;

(ಆ) ಇದಕ್ಕಾಗಿ ಕಳೆದ ೧೦ ವರ್ಷಗಳಲ್ಲಿ ಎಷ್ಟು ಹಣ ವೆಚ್ಚ ಮಾಡಲಾಗಿದೆ ;

(ಇ) ಶಾಶ್ವತ ಪರಿಹಾರದ ಕುರಿತು ಸರ್ಕಾರದ ನಿಲುವೇನು, ಈ ಕುರಿತಾಗಿ ಸರ್ಕಾರ ಯಾವ ಯೋಜನೆಯನ್ನು ಕೈಗೆತ್ತಿಕೊಳ್ಳುವುದು ?

## ನೇತ್ರಾವತಿ ತಿರುವು ಯೋಜನೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೨೯ (೩೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ಭಾಗದ ಜನರನ್ನು ಆತಂಕಕ್ಕೆ ಈಡು ಮಾಡಿರುವ ನೇತ್ರಾವತಿ ತಿರುವು ಯೋಜನೆ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವೇನು ;

(ಆ) ಈ ಯೋಜನೆ ಅನುಷ್ಠಾನಗೊಳಿಸಿದಲ್ಲಿ ಕರಾವಳಿ ಜನರ ದೈನಂದಿನ ಚಟುವಟಿಕೆಗಳಿಗೆ, ಕೃಷಿ ಹಾಗೂ ತೋಟಗಾರಿಕೆ ಚಟುವಟಿಕೆಗಳಿಗೆ ಮತ್ತು ಮೀನುಗಾರಿಕೆ ಅವಲಂಬಿಸಿರುವ ಮೀನುಗಾರರಿಗೆ ಪ್ರತಿಕೂಲ ಪರಿಣಾಮವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಯೋಜನೆಯಿಂದಾಗಿ ಅತ್ಯಂತ ಸೂಕ್ಷ್ಮ ಸಂವೇದಿ ಹಾಗೂ ವೈವಿಧ್ಯ ಜೀವ ಸಂಕುಲವಿರುವ ಪಶ್ಚಿಮಘಟ್ಟಕ್ಕೆ ಶಾಶ್ವತವಾಗಿ ಹಾನಿಯಾಗುವ ಕುರಿತು ಸರ್ಕಾರದ ಬಳಿ ಲಭ್ಯವಿರುವ ಮಾಹಿತಿ ಯಾವುದು ; ಈ ಕುರಿತಾಗಿ ಯಾವುದಾದರು ತಜ್ಞರ ವರದಿಯನ್ನು ಸ್ವೀಕರಿಸಲಾಗಿದೆಯೇ (ವಿವರ ನೀಡುವುದು) ?

## ಅರಣ್ಯ ಅಭಿವೃದ್ಧಿ ತೆರಿಗೆಯಿಂದ ಸಂಗ್ರಹಿಸಲಾದ ಹಣ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೩೦ (೩೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಅರಣ್ಯ ಅಭಿವೃದ್ಧಿ ತೆರಿಗೆಯಿಂದ ಸಂಗ್ರಹಿಸಲಾದ ಹಣವೆಷ್ಟು (ವರ್ಷವಾರು ಮಾಹಿತಿಯನ್ನು ಒದಗಿಸುವುದು) ;

(ಆ) ಈ ತೆರಿಗೆಯಿಂದ ಸಂಗ್ರಹಿಸಿದ ಹಣದಲ್ಲಿ ಎಷ್ಟು ಹಣವನ್ನು ಅರಣ್ಯಾಭಿವೃದ್ಧಿಗೆ ಖರ್ಚು ಮಾಡಲಾಗಿದೆ ; ಇದರಲ್ಲಿ ಎಷ್ಟು ಬಾಕಿ ಉಳಿದಿದೆ ;

(ಇ) ಈ ಬಾಕಿ ಉಳಿದಿರುವ ಹಣವನ್ನು ಯಾವ ರೀತಿ ಉಪಯೋಗಿಸಲು ಉದ್ದೇಶಿಸಲಾಗಿದೆ, ಸರ್ಕಾರವು ಈ ಹಣದ ಉಪಯೋಗಕ್ಕಾಗಿ ಯಾವುದಾದರೂ ಕಾಲಮಿತಿಯನ್ನು ಹಮ್ಮಿಕೊಂಡಿದೆಯೇ ?



## ಕರ್ನಾಟಕ ಮೂಲಗೇಣಿ ಅಥವಾ ಒಳಮೂಲಗೇಣಿದಾರರಿಗೆ ಮಾಲೀಕತ್ವವನ್ನು ಪ್ರಧಾನ ಮಾಡುವ ವಿಧೇಯಕ ಕುರಿತು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೩೧ (೩೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಮೂಲಗೇಣಿ ಅಥವಾ ಒಳಮೂಲಗೇಣಿದಾರರಿಗೆ ಮಾಲೀಕತ್ವವನ್ನು ಪ್ರಧಾನ ಮಾಡುವ ವಿಧೇಯಕವು ವಿಧಾನ ಮಂಡಲದ ಯಾವ ಅಧಿವೇಶನದಲ್ಲಿ ಅಂಗೀಕೃತಗೊಂಡಿದೆ ;

(ಆ) ವಿಧೇಯಕವು ವಿಧಾನ ಮಂಡಲದಲ್ಲಿ ಅಂಗೀಕೃತಗೊಂಡಿದ್ದರೂ ಇದುವರೆಗೂ ಕಾನೂನು ರೂಪದಲ್ಲಿ ಜಾರಿಗೆ ಬರದಿರಲು ಕಾರಣವೇನು ;

(ಇ) ಇದನ್ನು ಎಂದು ಜಾರಿಗೊಳಿಸಲಾಗುವುದು ?

## ಗಾಣಿಗರ ಸಂಘಕ್ಕೆ ಆಡಳಿತಾಧಿಕಾರಿ ನೇಮಕ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೩೨ (೧೩೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಖಿಲ ಕರ್ನಾಟಕ ಗಾಣಿಗರ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿರುವುದು ನಿಜವೇ ;

(ಆ) ಇದ್ದಲ್ಲಿ ನೇಮಿಸಿದ ದಿನಾಂಕ ಯಾವುದು ; ಸಂಘ ನೋಂದಣಿ ಕಾಯ್ದೆಯಂತೆ ಆಡಳಿತಾಧಿಕಾರಿಯ ಕಾರ್ಯಭಾರ ಯಾವಾಗ ಮುಕ್ತಾಯಗೊಳ್ಳಲಿದೆ ;

(ಇ) ಚುನಾಯಿತ ಆಡಳಿತ ಮಂಡಳಿ ಕಾರ್ಯರೂಪಕ್ಕೆ ಬರಲು ವಿಳಂಬಕ್ಕೆ ಕಾರಣವೇನು ; ಈಗ ಹಾಲಿ ಸಮಸ್ಯೆ ಬಗೆಹರಿದಿದೆಯೇ ; ಆಡಳಿತ ಮಂಡಳಿ ಪ್ರಕ್ರಿಯೆ ಇನ್ನೆಷ್ಟು ದಿನಗಳಲ್ಲಿ ಮುಗಿಯುತ್ತದೆ ?

## ಸಂಘ–ಸಂಸ್ಥೆಗಳಿಗೆ ಮಂಜೂರಾದ ಜಮೀನು

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೩೩ (೭೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿವಿಧ ಸಂಘ–ಸಂಸ್ಥೆಗಳಿಗೆ, ಮಠಗಳಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಸರ್ಕಾರ ಗುತ್ತಿಗೆ ಆಧಾರ ಮತ್ತು ರಿಯಾಯಿತಿ ದರದಲ್ಲಿ ಕ್ರಯ ಪತ್ರದ ಮೂಲಕ (Outrate Sale) ಸರ್ಕಾರಿ ಜಮೀನನ್ನು ಮಂಜೂರು ಮಾಡಿರುವುದು ನಿಜವೇ ;

(ಆ) ನಿಜವಾಗಿದ್ದರೆ, ಅಂತಹ ಸಂಸ್ಥೆಗಳ ಹೆಸರು, ಜಮೀನಿನ ವಿಸ್ತೀರ್ಣ, ಸರ್ಕಾರ ನಿಗದಿ ಮಾಡಿದ ದರ ಮತ್ತು ಮಂಜೂರು ಮಾಡಿದ ಷರತ್ತುಗಳ ವಿವರ ಒದಗಿಸುವುದು ;

(ಇ) ಮಂಜೂರಾದ ಗುತ್ತಿಗೆ ದರ ಅಥವಾ ರಿಯಾಯಿತಿ ಮಾರಾಟ ದರದ ವಿವರಗಳನ್ನು ಒದಗಿಸುವುದು ;

(ಈ) ೨೦೦೮–೦೯ರಿಂದ ೨೦೧೩–೧೪ನೇ ಸಾಲಿನವರೆಗೆ ಮೇಲಿನ ಎಲ್ಲಾ ವಿವರಗಳನ್ನು ಒದಗಿಸುವುದು ?



## ವನ್ಯ ಪ್ರಾಣಿಗಳ ದಾಳಿಯಿಂದ ಜನ–ಜಾನುವಾರುಗಳ ಪ್ರಾಣ ಹಾನಿ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–**

೧೩೪ (೧೦೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ ಒಂದು ವರ್ಷದಲ್ಲಿ ವನ್ಯ ಪ್ರಾಣಿಗಳ ದಾಳಿಯಿಂದ ಮೃತಪಟ್ಟ ಜನ–ಜಾನುವಾರುಗಳ ಸಂಖ್ಯೆ ಎಷ್ಟು ; ಪ್ರತಿಯೊಂದು ಪ್ರಕರಣದ ವಿವರ ಒದಗಿಸುವುದು ;

(ಆ) ಮೃತಪಟ್ಟ ವ್ಯಕ್ತಿಗಳ ಕುಟುಂಬದವರಿಗೆ ಮತ್ತು ಮೃತಪಟ್ಟ ಜಾನುವಾರುಗಳಿಗೆ ಸಂಬಂಧಿಸಿದಂತೆ ರೈತಾಪಿ ಜನರಿಗೆ ಪರಿಹಾರ ನೀಡಲಾಗಿದೆಯೇ ; ಪ್ರತಿಯೊಂದು ಪ್ರಕರಣದ ವಿವರ ಒದಗಿಸುವುದು ;

(ಇ) ವನ್ಯ ಪ್ರಾಣಿಗಳು ಈ ರೀತಿ ದಾಳಿ ಮಾಡಿ ಜನ–ಜಾನುವಾರುಗಳ ಪ್ರಾಣಹಾನಿ ಮಾಡುತ್ತಿರುವ ಬಗ್ಗೆ ವಿಶ್ಲೇಷಣೆ ನಡೆಸಿ ಈ ಘಟನೆಗಳು ಮರುಕಳಿಸದಂತೆ ಸರ್ಕಾರ ಪರಿಹಾರೋಪಾಯಗಳನ್ನು ಕೈಗೊಳ್ಳಲಾಗುವುದೇ ?

## ವನ್ಯ ಪ್ರಾಣಿಗಳ ದಾಳಿಯಿಂದ ಬೆಳೆಹಾನಿ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–**

೧೩೫ (೧೦೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಒಂದು ವರ್ಷದಿಂದ ಮೈಸೂರು ಚಾಮರಾಜನಗರ ಜಿಲ್ಲೆಗಳಲ್ಲಿ ವನ್ಯ ಪ್ರಾಣಿಗಳ ದಾಳಿಯಿಂದ ಉಂಟಾಗಿರುವ ಬೆಳೆ ಹಾನಿ ಪ್ರಕರಣಗಳು ಎಷ್ಟು ;

(ಆ) ಪ್ರತಿಯೊಂದು ಪ್ರಕರಣದಲ್ಲಿ ಉಂಟಾಗಿರುವ ಬೆಳೆ ಹಾನಿಯ ಅಂದಾಜು ಮಂಜೂರು ಮಾಡಿ ವಿತರಣೆ ಮಾಡಲಾಗಿರುವ ಪರಿಹಾರದ ಮೊತ್ತ ಇವುಗಳ ವಿವರ ಒದಗಿಸುವುದು ;

(ಇ) ಈಗ ನಿಗದಿಪಡಿಸಿರುವ ಬೆಳೆ ಹಾನಿ ಪರಿಹಾರದ ಮೊತ್ತ ಎಷ್ಟು ; ಇದನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೇ ?

## ರಾಜ್ಯದಲ್ಲಿರುವ ಜಮೀನುಗಳ ಪಹಣಿಗಳ ಸಂಖ್ಯೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–**

೧೩೬ (೧೪೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಜಮೀನು ಪಹಣಿಗಳ ಒಟ್ಟು ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಇದರಲ್ಲಿ ದೋಷ ಸಹಿತ ಇರುವ ಪಹಣಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಇ) ಹಾಗೆಯೇ ವಿವಿಧ ಜಿಲ್ಲೆಗಳಲ್ಲಿ ಪೋಡಿಯಾಗಲು ಬಾಕಿ ಇರುವ ಪ್ರಕರಣಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಈ) ಬಾಕಿ ಇರುವ ಪೋಡಿ ಪ್ರಕರಣಗಳನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು ಮತ್ತು ದೋಷವಿರುವ ಪಹಣಿಗಳನ್ನು ಎಷ್ಟು ದಿನಗಳಲ್ಲಿ ಸರಿಪಡಿಸಿಕೊಡಲಾಗುವುದು ;

(ಉ) ಇಷ್ಟೆಲ್ಲಾ ಪಹಣಿ ದೋಷ ಪ್ರಕರಣಗಳು/ಜೋಡಿಯಾಗುವ ಪ್ರಕರಣಗಳು ರಾಜ್ಯಾದ್ಯಂತ ಬಾಕಿ ಇರುವಾಗ ಕಂದಾಯ/ತಿದ್ದುಪಡಿ ಅದಾಲತ್ ಅನ್ನು ದಿನಾಂಕ:೩೧–೦೩–೨೦೧೫ರ ಒಳಗಾಗಿ ಪೂರ್ಣಗೊಳಿಸಲು ಸಾಧ್ಯವೇ (ವಿವರ ನೀಡುವುದು) ;



(ಊ) ಈ ಅವಧಿಯನ್ನು ಇನ್ನು ಹೆಚ್ಚಿನ ಅವಧಿಗೆ ಅಂದರೆ ೩೧–೦೩–೨೦೧೬ರ ತನಕ ಮುಂದುವರಿಸಲು ಸರ್ಕಾರ ಸೂಕ್ತ ಆದೇಶ ಹೊರಡಿಸಲು ತಕ್ಷಣವೇ ಕ್ರಮ ತೆಗೆದುಕೊಳ್ಳುವುದೇ ;

(ಋ) ಕಂದಾಯ/ತಿದ್ದುಪಡಿ ಅದಾಲತ್ ಬಗ್ಗೆ ಸರ್ಕಾರ ಇದುವರೆವಿಗೂ ಹೊರಡಿಸಿರುವ ಮಾರ್ಗಸೂಚಿಗಳು/ಸುತ್ತೋಲೆಗಳು/ಆದೇಶಗಳು ಯಾವುದು (ಅವುಗಳ ಪ್ರತಿ ನೀಡುವುದು) ?

## ಮೃಗಾಲಯಗಳು, ರಾಷ್ಟ್ರೀಯ ಉದ್ಯಾನವನಗಳಲ್ಲಿ ಮೃತಪಟ್ಟ ಪಾಣಿಗಳು

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೩೭ (೧೦೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷಗಳ ಅವಧಿಯಲ್ಲಿ ವಿವಿಧ ಕಾರಣಗಳಿಗಾಗಿ ರಾಜ್ಯದ ಮೃಗಾಲಯಗಳು, ರಾಷ್ಟ್ರೀಯ ಉದ್ಯಾನವನಗಳಲ್ಲಿ ಮೃತಪಟ್ಟ ವನ್ಯ ಜೀವಿಗಳ ಅಂದಾಜು ಸರ್ಕಾರಕ್ಕೆ ಇದೆಯೇ ; ಹಾಗಿದ್ದಲ್ಲಿ, ವರ್ಷವಾರು, ಪ್ರಾಣಿಗಳ ವಿವರ ಒದಗಿಸುವುದು ;

(ಆ) ಈ ಸಾವುಗಳಿಗೆ ಯಾವ ಕಾರಣಗಳನ್ನು ಗುರುತಿಸಲಾಗಿದೆ (ಪ್ರತ್ಯೇಕ ಮಾಹಿತಿ ಒದಗಿಸುವುದು) ;

(ಇ) ಪದೇ ಪದೇ ಮೃಗಾಲಯ, ರಾಷ್ಟ್ರೀಯ ಉದ್ಯಾನವನಗಳಲ್ಲಿ ಆಗುತ್ತಿರುವ ಪ್ರಾಣಿಗಳ ಸಾವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸರ್ಕಾರವು ಯಾವ ಯೋಜನೆಗಳನ್ನು ರೂಪಿಸಿದೆ (ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು) ?

## ಮೇಕೆದಾಟು ನೀರಾವರಿ ಯೋಜನೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೧೩೮ (೧೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕುಡಿಯುವ ನೀರಿಗಾಗಿ ಕೈಗೆತ್ತಿಕೊಳ್ಳಲಾದ ಕಾವೇರಿ–ಕೊಳ್ಳದ ಮೇಕೆದಾಟು ನೀರಾವರಿ ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದ್ದು, ತಮಿಳುನಾಡು ರಾಜ್ಯವು ಈ ವಿಷಯದಲ್ಲಿ ತಕರಾರು ತೆಗೆದಿರುವುದು ನಿಜವೇ ;

(ಆ) ಈ ಸಂಬಂಧ ತಮಿಳುನಾಡು ಸರ್ಕಾರ ಸುಪ್ರೀಂಕೋರ್ಟಿಗೆ ರಿಟ್ ಅರ್ಜಿ ಸಲ್ಲಿಸಿರುವುದು ನಿಜವೇ ;

(ಇ) ಹಾಗಿದ್ದಲ್ಲಿ, ಜಲಾಶಯ ನಿರ್ಮಿಸಿ ರಾಜ್ಯದ ಪಾಲಿನ ನೀರನ್ನು ಶೇಖರಿಸಲು ಸರ್ಕಾರ ಕಾನೂನು ಹೋರಾಟ ನಡೆಸಲು ಕೈಗೊಂಡಿರುವ ಕ್ರಮಗಳೇನು ?

## ಗಡಿಭಾಗದ ಹಳ್ಳಿಗಳು ಹಾಗೂ ಪುಣ್ಯಕ್ಷೇತ್ರಗಳು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೧೩೯ (೧೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆಂಧ್ರಪ್ರದೇಶ ಸರ್ಕಾರ ಕರ್ನೂಲು ಜಿಲ್ಲೆಯ ಗುಂಡ್ರೆವುಲ ಬಳಿ ತುಂಗಭದ್ರಾ ನದಿಗೆ ೨,೩೦೦ ಕೋಟಿ ರೂ ಅಂದಾಜು ವೆಚ್ಚದಲ್ಲಿ ಬೃಹತ್ ಅಣೆಕಟ್ಟು ನಿರ್ಮಿಸಲು ನಿರ್ಧರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;



(ಆ) ಇದರಿಂದಾಗಿ ನದಿ ಪ್ರಾತದಲ್ಲಿರುವ ರಾಯಚೂರು ಜಿಲ್ಲೆಯ ಐದಾರು ಗಡಿ ಹಳ್ಳಿಗಳು, ಸಾವಿರಾರು ಎಕರೆ ನೀರಾವರಿ ಭೂಮಿಗೆ ಹಿನ್ನೀರಿನ ಭೀತಿ ಆತಂಕ ವ್ಯಕ್ತವಾಗಿರುವುದರಿಂದ ಇದರ ಪರಿಹಾರಕ್ಕಾಗಿ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ ;

(ಇ) ಪುಣ್ಯಕ್ಷೇತ್ರಗಳಲ್ಲಿ ಒಂದಾದ ಎರಡು ಶತಮಾನಗಳಷ್ಟು ಹಳೆಯ ವ್ಯಾಸ ತತ್ವಜ್ಞರ ವೃಂದಾವನ ಇರುವ ವೇಣಿಸೋಂಪುರ, ಪುರಾತನ ಗೋಪಾಲಸ್ವಾಮಿ ಮತ್ತು ೧೬ ಕೈಗಳುಳ್ಳ ನರಸಿಂಹ ವಿಗ್ರಹವುಳ್ಳ ದೇವಸ್ಥಾನಗಳಿಗೆ ಈ ಅಣೆಕಟ್ಟು ನಿರ್ಮಾಣದಿಂದ ಕುತ್ತು ಬರಲಿದ್ದು ಇವುಗಳನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ನರಭಕ್ಷಕ ಹುಲಿಯ ಸ್ಥಳಾಂತರ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೧೪೦ (೨೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ತಾಲ್ಲೂಕಿನ ಮುಳ್ಳಯ್ಯಗಿರಿಯಲ್ಲಿ ಸೆರೆಹಿಡಿದ ನರಭಕ್ಷಕ ಹುಲಿಯನ್ನು ಪುನಃ ಯಾವ ಕಾಡಿಗೆ ಬಿಡಲಾಗಿದೆ ;

(ಆ) ಸದರಿ ಹುಲಿಯನ್ನು ಬೆಳಗಾವಿಯ ಖಾನಾಪುರ ತಾಲ್ಲೂಕಿನ ತಳೇವಾಡಿ ಅರಣ್ಯದಲ್ಲಿ ಬಿಟ್ಟ ಸಂದರ್ಭದಲ್ಲಿ ನಡೆದ ಘಟನೆಗಳ ವಿವರ ನೀಡುವುದು ;

(ಇ) ಈ ರೀತಿ ಸೆರೆಸಿಕ್ಕ ಕಾಡು ಪ್ರಾಣಿಗಳನ್ನು ಸರ್ಕಾರ ಸುರಕ್ಷಿತವಾಗಿ ಇಡಲು ಯಾವ ರೀತಿಯ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ (ವಿವರವಾದ ಮಾಹಿತಿಯನ್ನು ನೀಡುವುದು) ?

## ಅನುಚ್ಛೇದ ೩೭೧/J ಸಂಬಂಧ ದೃಢೀಕರಣ ಪತ್ರಗಳ ನಿಲುಗಡೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೧೪೧ (೨೫೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭಾರತ ಸಂವಿಧಾನ ೩೭೧/ಎ ಅನುಚ್ಛೇದ ಸೇರ್ಪಡೆ ತರುವಾಯ, ರಾಜ್ಯ ಸರ್ಕಾರ ಹೊರಡಿಸಿದ ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರಗಳ ಮೀಸಲಾತಿ ಸೌಲಭ್ಯಗಳನ್ನು ಪಡೆಯಲು, ಹೈದರಾಬಾದ್–ಕರ್ನಾಟಕ ಭಾಗದಲ್ಲಿ ಜನಿಸಿ, ವಾಸಿಸಿದವರು 'ವಾಸ ಸ್ಥಳ ದೃಢೀಕರಣ ಪತ್ರ' ಕೋರಿ ಸಲ್ಲಿಸಿರುವ ಮನವಿಗಳನ್ನು ಕಂದಾಯ ಇಲಾಖೆಯ ಅಧಿಕಾರಿಗಳು ಬಾಕಿ ಇಟ್ಟು, ದೃಢೀಕರಣ ಪತ್ರಗಳನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕಾರಣಗಳೇನು ;

(ಆ) ಮೀಸಲಾತಿ ಸೌಲಭ್ಯಗಳಡಿ ಉದ್ಯೋಗಗಳಿಗೆ ಅರ್ಜಿ ಹಾಕಲು ಅಥವಾ ಶಾಲಾ ಕಾಲೇಜುಗಳಲ್ಲಿ ನೋಂದಣಿ ಹೊಂದಲು ಲಕ್ಷಾಂತರ ಮಂದಿಗೆ ಆಗಿರುವ ತೊಂದರೆಗಳನ್ನು ಸರ್ಕಾರ ತುರ್ತಾಗಿ ಬಗೆಹರಿಸುವುದೇ ?

## ಕೆರೆಗಳ ಸರ್ವೆ ಕಾರ್ಯ ಒತ್ತುವರಿ ತೆರವು

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೨ (೧೪೧) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಕೆರೆಗಳ ಸರ್ವೆ ನಡೆಸಲಾಗಿದೆಯೇ ; ಸರ್ವೆ ನಡೆಸಿದ್ದು ಯಾವಾಗ ; ಸರ್ವೆ ಪ್ರಕಾರ ಕೆರೆಗಳ ಒಟ್ಟು ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;



(ಆ) ಈ ಪೈಕಿ ಒತ್ತುವರಿಯಾಗಿರುವ ಕೆರೆಗಳ ಸಂಖ್ಯೆ ಎಷ್ಟು ; ಅವು ಯಾವುವು ಮತ್ತು ಒತ್ತುವರಿಯಾಗಿರುವ ಪ್ರಮಾಣ ಎಷ್ಟು (ವಿವರಿಸುವುದು) ;

(ಇ) ಒತ್ತುವರಿಯಾಗಿರುವ ಕೆರೆಗಳ ಪೈಕಿ ತೆರವುಗೊಳಿಸಲು ಕ್ರಮ ಕೈಗೊಂಡಿರುವ ಕೆರೆಗಳೆಷ್ಟು ;

(ಈ) ಕೆರೆಗಳನ್ನು ಒತ್ತುವರಿ ಮಾಡಿಕೊಂಡಿರುವವರ ತಾಲ್ಲೂಕವಾರು ವಿವರ ನೀಡುವುದು ; ಇವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ?

## ಅರಣ್ಯ ಅಭಿವೃದ್ಧಿ ಕಾಮಗಾರಿಗಳು

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೩ (೧೪೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರಣ್ಯ ಇಲಾಖೆ ವತಿಯಿಂದ ಯಾವ ಯಾವ ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ (ವಿಭಾಗವಾರು, ವಲಯವಾರು, ಮಾಹಿತಿ ನೀಡುವುದು) ;

(ಆ) ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗೆ ನೀಡಲಾದ ಅನುದಾನವು ಸಮರ್ಪಕವಾಗಿ ಬಳಕೆಯಾಗುತ್ತಿದೆಯೇ (ವಿವರ ನೀಡುವುದು) ;

(ಇ) ಇಲಾಖೆಯಿಂದ ಜಿಲ್ಲೆಯಲ್ಲಿ ಅರಣ್ಯ ಪಾರ್ಕ್‌ನ್ನು ನಿರ್ಮಿಸಲು ಏನಾದರೂ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆಯೇ ; ಹಾಗಿದ್ದರೆ, ವಿವರ ನೀಡುವುದು ;

(ಈ) ರಾಜ್ಯದಲ್ಲಿ ಎಷ್ಟು ಎಕರೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಲಾಗಿದೆ (ವಿವರ ನೀಡುವುದು) ?

## ಬೆಂಗಳೂರು ನಗರದಲ್ಲಿ ಪರಿಸರ ಮಾಲಿನ್ಯ

**ಶ್ರೀ ಎಂ ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು)**

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೪ (೧೪೬+೧೦೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ ಕಾರಣದಿಂದಾಗಿ ಅಸ್ತಮಾ, ಅಲರ್ಜಿಯಂತಹ ಸಮಸ್ಯೆಗಳು ದಿನೇದಿನೇ ಹೆಚ್ಚುತ್ತಿರುವ ಅಂಶವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ ; ಹಾಗಿದ್ದಲ್ಲಿ, ಈ ಕುರಿತು ಹೆಚ್ಚಳದ ಮಾಹಿತಿ ಒದಗಿಸುವುದು ;

(ಆ) ವಾಯುಮಾಲಿನ್ಯವೂ ಸೇರಿದಂತೆ ಎಲ್ಲಾ ರೀತಿಯ ಪರಿಸರ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರವು ವಿಫಲವಾಗುತ್ತಿರುವ ಮತ್ತು ಇದರಿಂದಾಗಿ ಜನಸಾಮನ್ಯರ ಆರೋಗ್ಯದ ಮೇಲೆ ಬೀರುತ್ತಿರುವ ದುಷ್ಪರಿಣಾಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳು ಏನು ;

(ಇ) ಮಾಲಿನ್ಯ ನಿಯಂತ್ರಣ ಮಂಡಳಿಯು ಮಾಲಿನ್ಯ ನಿಯಂತ್ರಿಸುವ ಕಾರ್ಯದಲ್ಲಿ ಸಂಪೂರ್ಣ ವಿಫಲವಾಗಿ, ಪದೇ ಪದೇ ನ್ಯಾಯಾಲಯದಲ್ಲಿ ಈ ಬಗ್ಗೆ ಪ್ರಸ್ತಾಪವಾಗುತ್ತಿರುವ ಅಂಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ; ಹಾಗಿದ್ದಲ್ಲಿ, ಮಂಡಳಿಯ ಪ್ರಸ್ತುತೆಯನ್ನು ಸರ್ಕಾರವು ಮುಂದುವರೆಸುವ ನಿಟ್ಟಿನಲ್ಲಿ ಆಲೋಚಿಸಿದೆಯೇ ?



## ಬಗರ್ ಹುಕುಂ ಜಮೀನು ಹಂಚಿಕೆಯಲ್ಲಿ ಅವ್ಯವಹಾರಗಳು

**ಶ್ರೀ ಎಂ ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು)**

೧೪೫ (೧೪೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಭೂ ಮಂಜೂರಾತಿ ಸಮಿತಿಯ ಇದುವರೆವಿಗೂ ಬಗರ್ ಹುಕುಂ ಜಮೀನನ್ನು ಎಷ್ಟು ಜನರಿಗೆ ಎಷ್ಟು ಪ್ರಮಾಣದಲ್ಲಿ ಹಂಚಿಕೆ ಮಾಡಿದೆ (ಫಲಾನುಭವಿಗಳ, ಪ್ರದೇಶವಾರು ಸಂಪೂರ್ಣ ವಿವರ ಒದಗಿಸುವುದು) ;

(ಆ) ಬಗರ್ ಹುಕುಂ ಜಮೀನಿನ ಹಂಚಿಕೆಯಲ್ಲಿ ವ್ಯಾಪಕ ಪ್ರಮಾಣದಲ್ಲಿ ಅಕ್ರಮವಾಗಿದ್ದು, ಅರ್ಹರಿಗೆ ಅನಾನುಕೂಲವಾಗಿರುವ ಅಂಶವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ ; ಹಾಗಿದ್ದಲ್ಲಿ, ಇದರಲ್ಲಿ ಭಾಗಿಯಾದ ವ್ಯಕ್ತಿಗಳ ವಿರುದ್ಧ ಕೈಗೊಂಡ ಕ್ರಮಗಳು ಏನು (ಮಾಹಿತಿ ನೀಡುವುದು) ?

## ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬ (೨೪೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಕಳೆದ ೩ ವರ್ಷಗಳಲ್ಲಿ ದಾಖಲಾದ ಮತ್ತು ಇತ್ಯರ್ಥಗೊಂಡಿರುವ ಪ್ರಕರಣಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಕಳೆದ ಒಂದು ವರ್ಷದಲ್ಲಿ ರಾಜ್ಯದ ಜಿಲ್ಲಾಧಿಕಾರಿಗಳು ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಎಷ್ಟು ಸಭೆಗಳನ್ನು ನಡೆಸಿರುವರು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಇ) ರಾಜ್ಯದ ಬಹುತೇಕ ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ ಹಲವಾರು ವರ್ಷಗಳಿಂದ ಇತ್ಯರ್ಥವಾಗದೇ ಬಾಕಿ ಇರುವ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಇಂತಹ ಪ್ರಕರಣಗಳನ್ನು ಕಾಲಮಿತಿಯೊಳಗೆ ಇತ್ಯರ್ಥಪಡಿಸಲು ಸರ್ಕಾರದ ಮುಂದಿರುವ ಕ್ರಮಗಳೇನು ?

## ಎ.ಐ.ಬಿ.ಪಿ. ಯೋಜನೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೭ (೨೪೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೈಗೊಂಡಿರುವ ಭಾರಿ ಮತ್ತು ಮಧ್ಯಮ ನೀರಾವರಿಯ ಯೋಜನೆಗಳಾವುವು ;

(ಆ) ಈ ಯೋಜನೆಗಳಿಗೆ ನಿಗಧಿಪಡಿಸಿರುವ ಅನುದಾನವೆಷ್ಟು ;

(ಇ) ಎ.ಐ.ಬಿ.ಪಿ. (Accelerated Irrigation Benefit Project) ಯೋಜನೆಯು ಯಾವಾಗ ಮಂಜೂರಾಗಿದೆ ಹಾಗೂ ಈ ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರವು ಕೈಗೊಂಡ ಕ್ರಮಗಳೇನು ;

(ಈ) ಕಳೆದ ೩ ವರ್ಷಗಳಿಂದ, ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಎ.ಐ.ಬಿ.ಪಿ. ಯೋಜನೆ ಅಡಿಯಲ್ಲಿ ನೀಡಲಾಗಿರುವ ಅನುದಾನವೆಷ್ಟು (ವಿವರ ನೀಡುವುದು) ;

(ಉ) ಸರ್ಕಾರ ಇಲ್ಲಿಯವರೆವಿಗೂ ಎ.ಐ.ಬಿ.ಡಿ. ಯೋಜನೆಯಡಿಯಲ್ಲಿ ಖರ್ಚು ಮಾಡಿದ ಹಣವೆಷ್ಟು (ಯೋಜನಾವಾರು ಸಂಪೂರ್ಣ ವಿವರಗಳನ್ನು ನೀಡುವುದು) ?



## ಕೆರೆಗಳ ಸ್ಥಿತಿಗತಿ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೮ (೨೪೭) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮತ್ತು ಬೆಂಗಳೂರು ನಗರದಲ್ಲಿ ಕೆರೆಗಳು ಅಸ್ತಿತ್ವ ಕಳೆದುಕೊಳ್ಳಲು ಕಾರಣಗಳೇನು ;

(ಆ) ಕೆರೆಗಳಿಗೆ ತ್ಯಾಜ್ಯ ಸುರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕೆರೆಗಳನ್ನು ಉಳಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ;

(ಈ) ಉತ್ತಮ ಸ್ಥಿತಿಯಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ತುಂಬಿರುವ ಹೂಳನ್ನು ತೆಗೆಯುವ ಕಾರ್ಯವನ್ನು ಎಷ್ಟು ಕಾಲವಧಿಯಲ್ಲಿ ಪೂರ್ಣಗೊಳಿಸಲಾಗುವುದು ?

## ಅತಿವೃಷ್ಟಿ ಮತ್ತು ಅನಾವೃಷ್ಟಿ ಪರಿಹಾರಕ್ಕಾಗಿ ಕೇಂದ್ರದಿಂದ ದೊರೆತ ಅನುದಾನ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೮(ಎ) (೨೪೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೨–೧೩ ಹಾಗೂ ೨೦೧೩–೧೪ನೇ ಸಾಲಿನಲ್ಲಿ ಇಲ್ಲಿಯವರೆಗೆ ರಾಜ್ಯದಲ್ಲಿ ಉಂಟಾದ ಅತಿವೃಷ್ಟಿ ಹಾಗೂ ಅನಾವೃಷ್ಟಿ ಪರಿಹಾರಕ್ಕಾಗಿ ಕೇಂದ್ರ ಅಧ್ಯಯನ ತಂಡ ಎಷ್ಟು ಪರಿಹಾರಕ್ಕೆ ಶಿಫಾರಸ್ಸು ಮಾಡಿತ್ತು (ವಿವರ ನೀಡುವುದು) ;

(ಆ) ಕೇಂದ್ರದಿಂದ ದೊರೆತ ಹಣವೆಷ್ಟು ; ಈ ಹಣವನ್ನು ಖರ್ಚು ಮಾಡಲಾಗಿದೆಯೇ ?

## ನೀರಾವರಿ ಯೋಜನೆಗಳ ನಿರ್ವಹಣೆ/ಆಧುನೀಕರಣ

**ಶ್ರೀ ಅಮರನಾಥ ಪಾಟೀಲ (ಪದವೀಧರರ ಕ್ಷೇತ್ರ) :–**

೧೪೯ (೨೪೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಹಾಗೂ ದಾವಣಗೆರೆ ಜಿಲ್ಲೆಯಲ್ಲಿ ಕೈಗೊಂಡಿರುವ ನೀರಾವರಿ ಯೋಜನೆಗಳಿಗೆ ದುರಸ್ತಿ ನಿರ್ವಹಣೆ ಹಾಗೂ ಆಧುನೀಕರಣಕ್ಕಾಗಿ ಕೈಗೊಂಡಿರುವ ವೆಚ್ಚ ಎಷ್ಟು ; ೨೦೦೦ ಇಸವಿಯಿಂದ ಇಲ್ಲಿಯವರೆಗೆ ಯೋಜನಾವಾರು, ಮುಖ್ಯ ಕಾಲುವೆವಾರು ಹಾಗೂ ವಿತರಣಾ ಕಾಲುವೆವಾರು ವಿವರ ನೀಡುವುದು ;

(ಆ) ಈ ಮೇಲ್ಕಂಡ ಯೋಜನೆಗಳ ಅಡಿಯಲ್ಲಿ ಭೌತಿಕವಾಗಿ ಎಷ್ಟು ರೈತರ ಎಷ್ಟು ಎಕರೆ ಹೊಲಗಳಿಗೆ ನೀರನ್ನು ಒದಗಿಸಲಾಗಿದೆ (ಯೋಜನಾವಾರು ವಿವರ ನೀಡುವುದು) ;

(ಇ) ನ್ಯಾಯಾಧೀಕರಣಗಳ ತೀರ್ಪಿನ ಅಡಿಯಲ್ಲಿ ಯಾವ ಕಾಲಮಿತಿಯೊಳಗೆ ಈ ಮೇಲ್ಕಂಡ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು, ಇನ್ನು ಎಷ್ಟು ಕಾಲ ಮಿತಿಯೊಳಗೆ ರೈತರ ಹೊಲಗಳಿಗೆ ನೀರು ಹರಿಸಲಾಗುವುದು (ಮಾಹಿತಿ ನೀಡುವುದು) ?

## ನೀರಾವರಿ ಯೋಜನೆಗಳು: ಮುಳುಗಡೆಯಾದ ಜಮೀನು

**ಶ್ರೀ ಅಮರನಾಥ ಪಾಟೀಲ (ಪದವೀಧರರ ಕ್ಷೇತ್ರ) :–**

೧೫೦ (೨೫೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಹಾಗೂ ದಾವಣಗೆರೆ ಜಿಲ್ಲೆಯಲ್ಲಿ ಕೈಗೊಂಡಿರುವ ನೀರಾವರಿ ಯೋಜನೆಗಳು ಯಾವುವು ಹಾಗೂ ಯಾವಾಗ ಪ್ರಾರಂಭಗೊಂಡವು (ಅಣೆಕಟ್ಟು ಮಾಹಿತಿ, ಯೋಜನಾ ವೆಚ್ಚ, ನೀರು ಸಂಗ್ರಹ, ಎಕರೆವಾರು ನೀರಾವರಿ ಕ್ಷೇತ್ರ ಹಾಗೂ ಕಾಲುವೆಗಳ ಉದ್ದ ಸಂಪೂರ್ಣ ಮಾಹಿತಿ ಹಾಗೂ ನಕಾಶೆ ನೀಡುವುದು) ;



(ಆ) ಈ ಮೇಲ್ಕಂಡ ಯೋಜನೆಗಳ ಅಡಿಯಲ್ಲಿ ಮುಳುಗಡೆಯಾದ ಜಮೀನು ಎಷ್ಟು (ಯೋಜನಾವಾರು ಗ್ರಾಮವಾರು ಮಾಹಿತಿಯನ್ನು ನೀಡುವುದು) ;

(ಇ) ಈ ಯೋಜನೆಗಳ ಅಡಿಯಲ್ಲಿ ಮುಳುಗಡೆಯಾದ ಜಮೀನುಗಳಿಗೆ ಪರಿಹಾರ ನೀಡಲಾಗಿದೆಯೇ (ಯೋಜನೆವಾರು, ಗ್ರಾಮವಾರು ಪ್ರತಿ ಎಕರೆಗೆ ಕೊಟ್ಟಿರುವಂತಹ ಪರಿಹಾರದ ಮಾಹಿತಿ ನೀಡುವುದು) ;

(ಈ) ಪ್ರಸ್ತುತ ಸಾಲಿನವರೆಗೆ ಈ ಮೇಲ್ಕಂಡ ಯೋಜನೆಗಳ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಪ್ರಗತಿ ವಿವರ ಹಾಗೂ ವೆಚ್ಚ ಎಷ್ಟು (ಯೋಜನಾವಾರು, ಮುಖ್ಯ ಕಾಲುವೆ, ವಿತರಣಾ ಕಾಲುವೆವಾರು ಮಾಹಿತಿ ನೀಡುವುದು) ?

## ಅರಣ್ಯ ಅಭಿವೃದ್ಧಿ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೧ (೨೫೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಗೆ ೨೦೧೩–೧೪, ೨೦೧೪–೧೫ನೇ ಸಾಲಿನವರೆಗೆ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳಿಗೆ ಇನ್ನಿತರ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಬಿಡುಗಡೆ ಮಾಡಿದ ಅನುದಾನವೆಷ್ಟು (ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ) ಎಷ್ಟು ಯೋಜನೆಗಳವಾರು

ಅಂಕಿ–ಅಂಶಗಳೊಂದಿಗೆ ವರ್ಷವಾರು ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ಹಾಗಿದ್ದಲ್ಲಿ, ಕಳೆದ ೩ ವರ್ಷಗಳಲ್ಲಿ ನೆಡುತೋಪು (ಪ್ಲಾಂಟೇಷನ್) ಯೋಜನೆ ಕಾಮಗಾರಿಯನ್ನು ಯಾವ ಯಾವ ವ್ಯಾಪ್ತಿಯಲ್ಲಿ ಎಷ್ಟು ಹೆಕ್ಟೇರಿನಲ್ಲಿ ಕೈಗೊಳ್ಳಲಾಗಿದೆ ;

(ಇ) ಇದಕ್ಕೆ ತಗುಲಿದ ಖರ್ಚು ಎಷ್ಟು ; ಹಾಗೆ ಕೂಲಿ ಕಾರ್ಮಿಕರಿಗೆ ನೀಡಿದ ಹಣ ಎಷ್ಟು (ಆ ಕೂಲಿ ಕಾರ್ಮಿಕರ ಪಟ್ಟಿ ಮತ್ತು ಹೆಸರು, ಗುತ್ತಿಗೆ ನೀಡಿದ್ದಲ್ಲಿ ಗುತ್ತಿಗೆದಾರರ ಹೆಸರುಗಳೊಂದಿಗೆ ಅಂಕಿ–ಅಂಶಗಳೊಂದಿಗೆ ತಾಲ್ಲೂಕುವಾರು, ಯೋಜನೆಗಳವಾರು, ವರ್ಷವಾರು, ಸಂಪೂರ್ಣ ವಿವರ ನೀಡುವುದು) ?

## ಸಣ್ಣ ನೀರಾವರಿ ಯೋಜನೆಗಳು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೨ (೨೫೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಪ್ರಗತಿಯಲ್ಲಿರುವ ಯೋಜನೆಗಳು ಯಾವುವು, ಅವುಗಳಿಗೆ ಮೀಸಲಿಟ್ಟ ಹಣವೆಷ್ಟು (ವಿವಿಧ ಯೋಜನೆವಾರು ವಿವರ ನೀಡುವುದು) ;

(ಆ) ಇಲಾಖೆಯು ವತಿಯಿಂದ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳು ಯಾವುವು, ಅವುಗಳ ರೂಪರೇಷೆಗಳೇನು (ಯೋಜನಾವಾರು ವಿವರ ನೀಡುವುದು) ;

(ಇ) ಕಳೆದ ೩ ವರ್ಷಗಳಿಂದ ಜಿಲ್ಲೆಯಲ್ಲಿ ಇಲಾಖೆ ಇದುವರೆಗೆ ಸಾಧಿಸಿದ ಪ್ರಗತಿ ಏನು, ಅಂಕಿ ಅಂಶಗಳೊಂದಿಗೆ ತಾಲ್ಲೂಕುವಾರು ವಿವರ ನೀಡುವುದು ?



## ನಿರುದ್ಯೋಗ ಸಮಸ್ಯೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೩ (೨೫೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಇರುವ ಒಟ್ಟು ನಿರುದ್ಯೋಗಿ ಪದವೀಧರರೆಷ್ಟು (ಆಯಾ ಪದವಿಗಳನುಸಾರವಾಗಿ ವಿವರ ಒದಗಿಸುವುದು) ;

(ಆ) ಇದರಲ್ಲಿ ಪುರುಷ/ಮಹಿಳೆಯರ ವಯೋಮಿತಿ ಮೀರಿದವರ ಸಂಖ್ಯೆ ಎಷ್ಟು (ವಿವರ ನೀಡುವುದು) ;

(ಇ) ಪದವಿ, ಡಿ.ಎಡ್., ಬಿ.ಎಡ್., ವೈದ್ಯಕೀಯ, ಇಂಜಿನಿಯರಿಂಗ್, ಇನ್ನಿತರ ಪದವಿ ಪಡೆದು ಉದ್ಯೋಗವಿಲ್ಲದೆ (ನರಳುತ್ತಿರುವ) ನಿರುದ್ಯೋಗಿಗಳನ್ನು ಸರ್ಕಾರ ಗುರುತಿಸಿದೆಯೇ ;

(ಈ) ಸರ್ಕಾರ ಕಾನೂನುಬದ್ಧವಾಗಿ ನಿರುದ್ಯೋಗ ಸಮಸ್ಯೆಯನ್ನು ತೊಡೆದು ಹಾಕಲು ಕೈಗೊಂಡ ಮಹತ್ವದ ಕ್ರಮವೇನು ; ಹಾಗೂ ಸರ್ಕಾರದ ಮುಂದಿರುವ ಸವಾಲು, ಚಿಂತನೆ, ಹೊಸದಾದ ಮಾರ್ಗಗಳೇನು (ವಿವರ ನೀಡುವುದು) ?

## ಪ್ರಮಾಣ ಪತ್ರಗಳನ್ನು ಪಡೆಯಲು ಸಾರ್ವಜನಿಕರು/ವಿದ್ಯಾರ್ಥಿಗಳು ಪರದಾಡುತ್ತಿರುವುದು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೪ (೨೫೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಎಲ್ಲಾ ತಾಲ್ಲೂಕು ತಹಶೀಲ್ದಾರ್ ಕಛೇರಿಗಳಿಂದ ನೀಡಲಾಗುವ ಹಲವಾರು ಪ್ರಮಾಣ ಪತ್ರಗಳನ್ನು ಪಡೆಯಲು

ಸಾರ್ವಜನಿಕರು, ರೈತರು ಹಾಗೂ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇಂತಹ ಪ್ರಮಾಣ ಪತ್ರಗಳನ್ನು ದತ್ತಾಂಶಗೊಳಿಸಿ, ಆನ್‌ಲೈನ್‌ನಲ್ಲಿ ವಿತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ, ಹಾಗಿದ್ದಲ್ಲಿ, ಈ ಸಂಬಂಧ ತೆಗೆದುಕೊಳ್ಳುತ್ತಿರುವ ಕ್ರಮಗಳೇನು ;

(ಇ) ಬೀದರ್ ಜಿಲ್ಲೆಯ ತಹಶೀಲ್ದಾರ್ ಕಛೇರಿಯಲ್ಲಿ ಸಣ್ಣಪುಟ್ಟ ಕೆಲಸಗಳಿಗೂ ಸಾರ್ವಜನಿಕರಿಗೆ ಅಧಿಕಾರಿಗಳು ಸರಿಯಾಗಿ ಸಹಕರಿಸುತ್ತಿಲ್ಲವೆಂದು ಸಾರ್ವಜನಿಕರಿಂದ ದೂರುಗಳು ಬಂದಿವೆಯೇ, ಬಂದಿದ್ದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳಲಾಗಿದೆ (ವಿವರ ನೀಡುವುದು) ;

(ಈ) ಎಲ್ಲಾ ತಹಶೀಲ್ದಾರ್‌ಗಳ ಕಛೇರಿಗಳಲ್ಲಿ ಎಲ್ಲಾ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ ಯಾರು ಎಷ್ಟು ವರ್ಷಗಳಿಂದ ಕರ್ತವ್ಯನಿರ್ವಹಿಸುತ್ತಿದ್ದಾರೆ (ಅವರ ಹೆಸರು ಮತ್ತು ಪದನಾಮದೊಂದಿಗೆ) ?

## ಕಾರಂಜ ಜಲಾಶಯದಲ್ಲಿ ತುಂಬಿರುವ ಹೂಳು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೫೫೫ (೨೫೫೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರಂಜ ಜಲಾಶಯದಲ್ಲಿ ಪ್ರತಿ ವರ್ಷ ತುಂಬುತ್ತಿರುವ ಹೂಳಿನ ಅಂದಾಜು ಪ್ರಮಾಣವೆಷ್ಟು ;

(ಆ) ಈಗಾಗಲೇ ಜಲಾಶಯದಲ್ಲಿ ತುಂಬಿರುವ ಹೂಳಿನ ಪ್ರಮಾಣವೆಷ್ಟು;

(ಇ) ಪ್ರಸ್ತುತ ನೀರಿನ ಸಂಗ್ರಹದ ಸಾಮರ್ಥ್ಯವೆಷ್ಟು ; ಪ್ರಾರಂಭದಲ್ಲಿದ್ದ ನೀರಿನ ಸಂಗ್ರಹದ ಸಾಮರ್ಥ್ಯವೆಷ್ಟು ;



(ಈ) ಕಾರಂಜ ಜಲಾಶಯದಿಂದ ಮಾಂಜರಾ ನದಿಗೆ ನೀರು ಹರಿಸಿದರೆ ಸುಮಾರು ಹಳ್ಳಿಗಳಿಗೆ ಅನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ ನೀರನ್ನು ಯಾವಾಗ ಹರಿಸಲಾಗುವುದು (ವಿವರ ನೀಡುವುದು) ?

## ಅರಣ್ಯಾಧಿಕಾರಿಗಳಿಂದ ಭೀತಿ ಸೃಷ್ಟಿ

**ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೬ (೩೨೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಜಿಲ್ಲೆಯ ಗ್ರಾಮಗಳಲ್ಲಿ ವಾಸಿಸುತ್ತಿರುವ ಜನರಲ್ಲಿ ಹುಲಿ ಯೋಜನೆ ಹೆಸರಿನಲ್ಲಿ ಅರಣ್ಯ ಅಧಿಕಾರಿಗಳು ಭೀತಿ ಸೃಷ್ಟಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಇದರ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ರಾಜ್ಯದಲ್ಲಿ ಹುಲಿ ಹಾಗೂ ಇತರೆ ಕಾಡು ಪ್ರಾಣಿಗಳಿಂದ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿನ ಜನರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕಾಡು ಪ್ರಾಣಿಗಳಿಂದ ತೊಂದರೆಯಾಗದಂತೆ ಶಾಶ್ವತ ಪರಿಹಾರವನ್ನು ಕೈಗೊಳ್ಳಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

## ಹೊಸ ತಾಲ್ಲೂಕು ರಚನೆ

**ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೭ (೩೨೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವ ಪ್ರಸ್ತಾವನೆ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ;

(ಆ) ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಿಂದ ೫೫ ಕಿ.ಮೀ. ದೂರವಿರುವ ಕಳಸ ಕೇಂದ್ರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಸರ್ಕಾರ ಏನು ಕ್ರಮ ಕೈಗೊಂಡಿದೆ ?

## ಭೂ ಪ್ರದೇಶ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೧೫೮ (೩೩೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಒಟ್ಟು ಭೂ ಪ್ರದೇಶವೆಷ್ಟು ; ಅದರಲ್ಲಿ ಕೃಷಿ ಯೋಗ್ಯ ಭೂಮಿ ಎಷ್ಟು ಹಾಗೂ ಅರಣ್ಯ ಮುಂತಾದ ಪ್ರದೇಶ ಎಷ್ಟು ;

(ಆ) ಒಟ್ಟಾರೆ ಪ್ರದೇಶದಲ್ಲಿ ಸರ್ಕಾರಕ್ಕೆ ಸೇರಿರುವ ಭೂಮಿ ವಿಸ್ತೀರ್ಣ ಎಷ್ಟು ; ಯಾವ ಯಾವ ತರಹದ ಭೂಮಿ ಇದೆ ; ಆ ಭೂಮಿಯನ್ನು ಸಂರಕ್ಷಿಸಲು ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಸರ್ಕಾರಿ ಭೂಮಿಯಲ್ಲಿ ಎಲ್ಲೆಲ್ಲಿ ಯಾರ್‍ಯಾರು, ಎಷ್ಟೆಷ್ಟು ಜಾಗವನ್ನು ಅತಿಕ್ರಮಣ ಮಾಡಿಕೊಂಡಿದ್ದಾರೆ ; ಅವರುಗಳ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಅರಣ್ಯ ಪ್ರದೇಶದ ರಕ್ಷಣೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೧೫೯ (೩೨೯) ಮಾನ್ಯ ಅರಣ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ರಾಜ್ಯದಲ್ಲಿ ಎಷ್ಟು ವಿಧವಾದ ಅರಣ್ಯಗಳಿವೆ ; ಎಷ್ಟು ವಿಸ್ತೀರ್ಣದ ಅರಣ್ಯಪ್ರದೇಶ ಇದೆ ; ಆ ಅರಣ್ಯ ಪ್ರದೇಶವನ್ನು ಸಂರಕ್ಷಿಸಲು ತೆಗೆದುಕೊಂಡಿರುವ ಕ್ರಮಗಳೇನು (ವಲಯವಾರು ಮಾಹಿತಿ ನೀಡುವುದು) ?



## ಗ್ರಾಮ, ಪಟ್ಟಣ ಮತ್ತು ನಗರಗಳಲ್ಲಿ ರುದ್ರಭೂಮಿ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೧೬೦ (೩೨೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇರುವ ಗ್ರಾಮ, ಪಟ್ಟಣ ಮತ್ತು ನಗರಗಳು ಎಷ್ಟು ; ಅವು ಯಾವುವು ; ಈ ಗ್ರಾಮ, ಪಟ್ಟಣ ಮತ್ತು ನಗರಗಳಲ್ಲಿ ರುದ್ರಭೂಮಿಗಳಿಗೆ ಜಾಗ ಒದಗಿಸಲಾಗಿದೆಯೇ ; ಆವುಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು (ಗ್ರಾಮ, ಪಟ್ಟಣ ಮತ್ತು ನಗರವಾರು ವಿವರ ನೀಡುವುದು) ;

(ಆ) ರುದ್ರಭೂಮಿಗಳಲ್ಲಿ ಜಾತಿ/ವರ್ಗವಾರು ರುದ್ರಭೂಮಿಗಳು ಇವೆಯೇ ; ಇದ್ದರೆ, ಎಲ್ಲೆಲ್ಲಿ ಇರುತ್ತವೆ (ವಿವರ ನೀಡುವುದು) ?

## ಕಾವೇರಿ, ಕೃಷ್ಣಾ, ಪೆನ್ನಾರ್ ಕಣಿವೆಗಳಲ್ಲಿ ನೀರಿನ ಲಭ್ಯತೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೧೬೧ (೩೨೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಕಾವೇರಿ ಕಣಿವೆ, ಕೃಷ್ಣಾ ಕಣಿವೆ, ಪೆನ್ನಾರ್ ಕಣಿವೆಗಳಲ್ಲಿ ಹಾಗೂ ಪಶ್ಚಿಮ ಘಟ್ಟಗಳ ಮೂಲದಿಂದ ೨೦೧೧–೧೨, ೨೦೧೨–೧೩, ೨೦೧೩–೧೪ ಸಾಲಿನ ವರ್ಷಗಳಲ್ಲಿ ಮಳೆಯಿಂದ ಲಭ್ಯವಾಗಿರುವ ನೀರು ಎಷ್ಟು (ಕಣಿವೆವಾರು ವರದಿ ನೀಡುವುದು);

(ಆ) ಎಷ್ಟು ಟಿ.ಎಮ್.ಸಿ. ನೀರು ಲಭ್ಯವಾಗುತ್ತಿದೆ ; ಎಷ್ಟು ನೀರನ್ನು ಕೃಷಿಗಾಗಿ, ಕುಡಿಯುವ ಬಳಕೆಗೆ ಹಾಗೂ ಕೈಗಾರಿಕೆಗಳಿಗಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆ ; ಬಳಕೆ ಮಾಡಿಕೊಳ್ಳಲು ನಿರ್ಮಾಣ ಮಾಡಿರುವ ನೀರಾವರಿ ಯೋಜನೆಗಳು ಯಾವುವು ;

(ಇ) ಈ ಯೋಜನೆಗಳಲ್ಲಿ ಎಷ್ಟು ನೀರು ಕ್ರೋಢೀಕರಿಸಬಹುದು ; ಹಾಗೂ ಯಾವ ಯಾವ ನೀರಾವರಿ ಯೋಜನೆ/ಡ್ಯಾಮ್‌ಗಳಲ್ಲಿ ಎಷ್ಟೆಷ್ಟು ಹೂಳು ತುಂಬಿಕೊಳ್ಳಲಾಗಿದೆ ; ಆ ಹೂಳನ್ನು ತೆಗೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಯೋಜನೆವಾರು ವಿವರ ನೀಡುವುದು) ?

## ಹಸಿರೀಕರಣಕ್ಕಾಗಿ ಲಭ್ಯವಿರುವ ಭೂ ಪ್ರದೇಶ

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೨ (೩೩೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೀರಾವರಿ ಇಲಾಖೆ ರಾಜ್ಯವ್ಯಾಪ್ತಿ ತನಗೆ ಲಭ್ಯವಿರುವ ಅಚ್ಚುಕಟ್ಟು ಪ್ರದೇಶಗಳಲ್ಲಿ ಹಸಿರೀಕರಣ ಕಾರ್ಯ ಕೈಗೆತ್ತಿಕೊಳ್ಳಲು ಬಯಸಿದಲ್ಲಿ ಲಭ್ಯವಾಗಬಹುದಾದ ಭೂ ಪ್ರದೇಶದ ಪ್ರಮಾಣವೆಷ್ಟು ;

(ಆ) ಹಸಿರೀಕರಣ ಉದ್ದೇಶಕ್ಕಾಗಿ ತನಗೆ ಲಭ್ಯವಾಗಬಹುದಾದ ಭೂಪ್ರದೇಶವನ್ನು ಬಳಸಿಕೊಂಡು ಯೋಜನಾಬದ್ಧವಾಗಿ ಇಲಾಖೆಯು ಹಸಿರೀಕರಣ ಯೋಜನೆ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳಲು ಅವಕಾಶ ಮಾಡಿಕೊಳ್ಳಲಾಗಿದೆಯೇ ;



(ಇ) ಹಾಗಿದ್ದಲ್ಲಿ, ಈವರೆವಿಗೂ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಎಷ್ಟು ಪ್ರಮಾಣದ ಈ ರೀತಿಯ ಭೂಮಿಯನ್ನು ಹಸಿರೀಕರಣ ಯೋಜನೆಯಡಿ ಅಭಿವೃದ್ಧಿಪಡಿಸಲಾಗಿದೆ (ವಿವರವನ್ನು ಒದಗಿಸುವುದು) ;

(ಈ) ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಹಸಿರೀಕರಣ ಕಾರ್ಯ ಕೈಗೆತ್ತಿಕೊಳ್ಳಲು ಭೂಮಿ ಲಭ್ಯವಿದ್ದರೂ ಹಸಿರೀಕರಣಕ್ಕೆ ಆದ್ಯತೆ ಮತ್ತು ಸಕಾಲದಲ್ಲಿ ಆರ್ಥಿಕ ಸಂಪನ್ಮೂಲ ಒದಗಿಸದಿರಲು ಕಾರಣಗಳೇನು ; ತಮ್ಮ ವ್ಯಾಪ್ತಿಯುಲ್ಲಿ ಈ ಉದ್ದೇಶಕ್ಕಾಗಿ ಲಭ್ಯವಾಗಬಹುದಾದ ಭೂಮಿಯನ್ನು ವ್ಯವಸ್ಥಿತವಾಗಿ ಕಾಲ ಕಾಲಕ್ಕೆ ಬಳಸಿಕೊಳ್ಳದ ಅಧಿಕಾರಿಗಳ ಮೇಲೆ ಕಾನೂನಾತ್ಮಕ ಕ್ರಮ ಜರುಗಿಸಲಾಗಿದೆಯೇ (ಮಾಹಿತಿ ಒದಗಿಸುವುದು) ?

## ಔಷಧೀಯ ಸಸ್ಯಗಳ ಪುನರುಜ್ಜೀವನ

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೩ (೩೩೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅನಾದಿಕಾಲದಿಂದಲೂ ಜನಸಾಮಾನ್ಯರಿಂದ ಹಾಗೂ ಇಲಾಖೆಯಿಂದ ವಿಶೇಷ ಮಾನ್ಯತೆ ಪಡೆದಿರುವ ಔಷಧಿ ಗುಣಗಳುಳ್ಳ ಸಸ್ಯ ಪ್ರಭೇದಗಳು ಯಾವುವು ;

(ಆ) ಈ ಪ್ರಭೇದಗಳ ಮಹತ್ವಕ್ಕನುಗುಣವಾಗಿ ಸದರಿ ಪ್ರಭೇದಗಳ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಹೋಗಲು ಈವರೆಗೆ ಇಲಾಖೆ ಅನುಸರಿಸುತ್ತಾ ಬಂದಿರುವ ಯೋಜನಾಬದ್ಧ ಮಾರ್ಗೋಪಾಯ ಗಳಾವುವು ;

(ಇ) ಈ ರೀತಿ ವಿಶೇಷ ಮಹತ್ವ ಪಡೆದಿರುವ ಸಸ್ಯ ಪ್ರಭೇದಗಳಲ್ಲಿ ಸಂಪೂರ್ಣ ಕಣ್ಮರೆಯಾಗಿರುವ ಪ್ರಭೇದಗಳಾವುವು ಎಂಬುದನ್ನು ಗುರುತಿಸಲಾಗಿದೆಯೇ ; ಅವುಗಳ ಪುನರುಜ್ಜೀವನ ಕಾರ್ಯಕ್ಕಾಗಿ ಇಲಾಖೆ ಈವರೆಗೆ ತೆಗೆದುಕೊಂಡಿರುವ ಕ್ರಮಗಳೇನು ;

(ಈ) ಅದೇ ಮಾದರಿಯಲ್ಲಿ ಅಳಿವಿನ ಅಂಚಿನಲ್ಲಿರುವ ಈ ರೀತಿಯ ಸಸ್ಯ ಪ್ರಭೇದಗಳ ಮಾಹಿತಿ ಒದಗಿಸುವುದು ;

(ಉ) ಔಷಧಿ ಗುಣಗಳುಳ್ಳ ಪ್ರಭೇದಗಳ ಕಚ್ಚಾ ಪದಾರ್ಥಕ್ಕಾಗಿ ದೇಶೀಯ ಮತ್ತು ಜಾಗತಿಕ ಮಟ್ಟದಲ್ಲಿ ಸಾಕಷ್ಟು ಬೇಡಿಕೆ ಇದ್ದೂ ಈ ಬೇಡಿಕೆ ಪೂರೈಸಲು ಇಲಾಖೆ ಮುಂದಿರುವ ಯೋಜನೆ ಮತ್ತು ಕೈಗೊಂಡ ಕ್ರಮಗಳೇನು (ಸಂಪೂರ್ಣ ಮಾಹಿತಿ ಒದಗಿಸುವುದು)?

## ಅಣೆಕಟ್ಟು ವ್ಯಾಪ್ತಿಗಳಲ್ಲಿ ಉದ್ಯಾನವನ ಅಭಿವೃದ್ಧಿ

**ಶ್ರೀ ಸಿ. ಹೆಚ್. ವಿಜಯಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೪ (೩೩೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅಣೆಕಟ್ಟು ಪ್ರದೇಶ ವ್ಯಾಪ್ತಿಯಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಇಲಾಖೆಯಿಂದ ಯಾವ ಯಾವ ಭಾಗದಲ್ಲಿ ಜಾಗಗಳನ್ನು ಕಾಯ್ದಿರಿಸಲಾಗಿದೆ ; ಅನೇಕ ದಶಕಗಳಿಂದ ಈ ರೀತಿಯ ಜಾಗಗಳನ್ನು ಮೇಲ್ಕಾಣಿಸಿದ ಕಾರಣಕ್ಕಾಗಿ ಕಾಯ್ದಿರಿಸಲಾಗಿದ್ದರೂ ಸಮರ್ಪಕವಾಗಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸದಿರಲು ಕಾರಣಗಳೇನು ;



(ಆ) ಒಂದು ಸದುದ್ದೇಶದ ಹಿನ್ನೆಲೆಯಲ್ಲಿ ಭೂಮಿಯನ್ನು ಕಾಯ್ದಿರಿಸಲಾಗಿದ್ದರೂ ಸಮರ್ಪಕವಾಗಿ ಸದರಿ ಭೂಮಿಯನ್ನು ಸಕಾಲದಲ್ಲಿ ಬಳಕೆ ಮಾಡಿಕೊಳ್ಳದ ಹಾಗೂ ಸೂಕ್ತ ಯೋಜನೆ ರೂಪಿಸಿ, ಯೋಜನೆಯನ್ನು ಅನುಷ್ಠಾನಗೊಳಿಸದ ಅಧಿಕಾರಿಗಳ ಮೇಲೆ ಇಲಾಖೆ ಈವರೆಗೆ ತೆಗೆದುಕೊಂಡಿರುವ ಕ್ರಮಗಳೇನು ?

## ನೀರಾವರಿ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಹಸಿರೀಕರಣ

**ಶ್ರೀ ಸಿ. ಹೆಚ್. ವಿಜಯಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೫ (೩೩೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೀರಾವರಿ ಇಲಾಖೆ ವಾರ್ಷಿಕವಾರು ತನಗೆ ಲಭ್ಯವಾಗಬಹುದಾದ ಒಟ್ಟು ಅನುದಾನದಲ್ಲಿ ಶೇಕಡಾವಾರು ಎಷ್ಟು ಪ್ರಮಾಣದ ಹಣವನ್ನು ತನ್ನ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶದಲ್ಲಿ ಹಸಿರೀಕರಣ ಕಾರ್ಯ ಕೈಗೆತ್ತಿಕೊಳ್ಳಲು ಮೀಸಲಿರಿಸುವ ಪದ್ಧತಿ ಇಲಾಖೆಯಲ್ಲಿ ಜಾರಿಯಲ್ಲಿದೆ ;

(ಆ) ಕಳೆದ ಹತ್ತು ವರ್ಷಗಳಿಂದ ನೀರಾವರಿ ಇಲಾಖೆ ತನ್ನ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಹಸಿರೀಕರಣ ಕಾರ್ಯ ಕೈಗೆತ್ತಿಕೊಳ್ಳಲು ತಾನು ಈವರೆಗೂ ಒದಗಿಸಿದ ಹಣಕಾಸಿನ ನೆರವಿನ ಪ್ರಮಾಣದ ವಿವರಗಳನ್ನು ನೀಡುವುದು ;

(ಇ) ರಾಜ್ಯದ ನೀರಾವರಿ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ೧೧,೭೦೦ ಕಿ.ಮೀ. ನಾಲಾ ರಸ್ತೆಗಳು ಹಾಗೂ ನಾಲಾ ಬಂಡು ಲಭ್ಯವಿದ್ದಾಗ್ಯೂ ಈ ಭೂಮಿಯ ಶೇ. ೫೦ರಷ್ಟು ಪ್ರದೇಶವನ್ನು ಹಸಿರೀಕರಣಕ್ಕಾಗಿ

ಈವರೆಗೂ ಬಳಸಲಾಗಿಲ್ಲ ; ಈ ರೀತಿಯ ಲೋಪಗಳನ್ನು ಇಲಾಖೆಯಲ್ಲಿ ಕಾಣಲು ಮುಖ್ಯ ಕಾರಣವೇನು ; ಈ ಮಾಹಿತಿಯು ಸರಿಯಾಗಿದ್ದ ಪಕ್ಷದಲ್ಲಿ ಇಲಾಖೆಯ ಸದ್ಯದ ನಿಯಮಾವಳಿಗಳಿಗೆ ತಿದ್ದುಪಡಿ ತರುವ ಅವಶ್ಯಕತೆ ಇದೆಯೇ (ವಿವರಗಳನ್ನು ನೀಡುವುದು) ?

## ಕಾವೇರಿ ನದಿ ಶುದ್ಧೀಕರಣ

**ಶ್ರೀ ಸಿ. ಹೆಚ್. ವಿಜಯಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೬ (೩೩೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೇಂದ್ರ ಸರ್ಕಾರ ಗಂಗಾ ನದಿಯ ಶುದ್ಧೀಕರಣಕ್ಕೆ ಇತ್ತೀಚಿನ ದಿನಗಳಲ್ಲಿ ಆದ್ಯತೆ ನೀಡಿರುವಂತೆ ಹಾಗೂ ಈ ಕಾರ್ಯಕ್ಕಾಗಿ ವ್ಯವಸ್ಥಿತವಾಗಿ ಯೋಜನಾ ಸಮಿತಿ ರಚಿಸಿ, ಸದರಿ ಯೋಜನೆಯನ್ನು ಸಮರ್ಪಕವಾಗಿ ಕಾರ್ಯಗತಗೊಳಿಸಲು ಚಿಂತಿಸಿದ ಮಾದರಿಯಲ್ಲಿಯೇ ದಕ್ಷಿಣ ಭಾರತದ ಗಂಗಾ ನದಿಯೆಂದೇ ಪರಿಗಣಿಸಲ್ಪಡುವ ಜೀವನದಿ ಕಾವೇರಿಯ ಶುದ್ಧೀಕರಣಕ್ಕೂ ಅದೇ ಮಾದರಿಯಲ್ಲಿಯೇ ರಾಜ್ಯ ಸರ್ಕಾರದಿಂದಲೂ ಯೋಜನೆ ರೂಪಿಸಲಾಗುವುದೇ ;

(ಆ) ಈ ಯೋಜನೆಗೆ ಅವಶ್ಯವಿರುವ ಸಂಪನ್ಮೂಲ ಕ್ರೋಢೀಕರಿಸಲು ಮತ್ತು ಕೇಂದ್ರ ಸರ್ಕಾರದಿಂದ ಲಭ್ಯವಾಗಬಹುದಾದ ಧನಸಹಾಯ ತಾಂತ್ರಿಕ ಮಾರ್ಗದರ್ಶನ ಇತರೆ ಪೂರಕ ಅನುಕೂಲತೆಗಳನ್ನು ಸಕಾಲದಲ್ಲಿ ಪಡೆದುಕೊಳ್ಳಲು ಅಧಿಕೃತ ಬೇಡಿಕೆಯೊಂದನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಕ್ರಮ ವಹಿಸಲಾಗುವುದೇ ;



(ಇ) ಈ ಯೋಜನೆಯನ್ನು ಕೈಗೆತ್ತಿಕೊಂಡ ಸಂದರ್ಭದಲ್ಲಿ ನದಿ ಪಾತ್ರದಲ್ಲಿನ ಭೂ ಸವಕಳಿ ತಡೆಯಲು ಮತ್ತು ಹಸಿರೀಕರಣಕ್ಕೆ ಆದ್ಯತೆ ನೀಡುವ ಕಾರಣಕ್ಕಾಗಿ ನದಿಯ ಇಕ್ಕೆಲಗಳಲ್ಲಿ ಹಸಿರೀಕರಣ ಕಾರ್ಯ ಕೈಗೆತ್ತಿಕೊಳ್ಳಲು ಕೂಡ ಆದ್ಯತೆ ನೀಡಲಾಗುವುದೇ ;

(ಈ) ಕಾವೇರಿ ನದಿಯ ಶುದ್ಧೀಕರಣದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈಗಾಗಲೇ ಯೋಜನೆ ರೂಪಿಸುತ್ತಿದ್ದಲ್ಲಿ ಅದರ ಕಾರ್ಯಸ್ವರೂಪ ಮತ್ತು ಯೋಜನೆಗಳೇನು (ವಿವರಗಳನ್ನು ಒದಗಿಸುವುದು) ?

## ಕ್ರೀಡಾ ನೀತಿ ಜಾರಿ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೬೭ (೩೮೩) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೊಸ ಕ್ರೀಡಾ ನೀತಿ ರಚನೆಯನ್ನು ಮಾಡಲಾಗಿದೆಯೇ ;

(ಆ) ಈ ನೀತಿಯ ಅನುಸಾರ ಪ್ರತಿ ಜಿಲ್ಲೆಗಳಲ್ಲಿ ಇಲ್ಲಿಯವರೆವಿಗೆ ಎಷ್ಟು ಯುವಶಕ್ತಿ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆ ;

(ಇ) ಗ್ರಾಮೀಣ ಜನರ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಕಳೆದ ೧ ವರ್ಷದ ಅವಧಿಯಲ್ಲಿ ಎಷ್ಟು ಗ್ರಾಮೀಣ ಕ್ರೀಡೋತ್ಸವಗಳನ್ನು ಆಯೋಜಿಸಲಾಗಿದೆ ;

(ಈ) ನೂತನ ಗರಡಿ ಮನೆಗಳ ನಿರ್ಮಾಣಕ್ಕಾಗಿ ಎಷ್ಟು ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡಿದೆ ; ಕಳೆದ ೧ ವರ್ಷದಿಂದ ಎಷ್ಟು ಗರಡಿ ಮನೆಗಳನ್ನು ನಿರ್ಮಾಣ ಮಾಡಲಾಗಿದೆ ?

## ವಿದ್ಯಾರ್ಥಿಗಳಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ವಿತರಣೆ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೬೮ (೩೮೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸರ್ಕಾರಿ ಶಾಲೆಗಳಲ್ಲಿಯೇ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ವಿತರಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ;

(ಆ) ಇಲ್ಲಿಯವರೆಗೆ ರಾಜ್ಯದ ಎಷ್ಟು ಶಾಲೆಗಳಲ್ಲಿ ಜಾತಿ ಮತ್ತು ಆದಾಯ ಪ್ರಮಾಣಪತ್ರವನ್ನು ಶಾಲಾ ಮಟ್ಟದಲ್ಲಿ ವಿತರಿಸಲಾಗುತ್ತಿದೆ ;

(ಇ) ಇದೇ ಮಾದರಿಯಲ್ಲಿ ಖಾಸಗಿ ಶಾಲೆಗಳಲ್ಲಿಯೂ ಸಹ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಶಾಲಾ ಮಟ್ಟದಲ್ಲಿ ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಪಹಣಿಗಳ ತಿದ್ದುಪಡಿ ತಹಶೀಲ್ದಾರರಿಗೆ ಅಧಿಕಾರ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೬೯ (೩೮೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ೧೭೬ ತಾಲ್ಲೂಕು ಕಛೇರಿಗಳಲ್ಲಿ "ಪಡಸಾಲೆ ಯೋಜನೆಯ" ಅಡಿಯಲ್ಲಿ ದೋಷಪೂರಿತ ಪಹಣಿಗಳ ಶೀಘ್ರ ತಿದ್ದುಪಡಿಗೆ ಹೋಬಳಿ ಮತ್ತು ಗ್ರಾಮ ಮಟ್ಟದಲ್ಲಿ ಕಳೆದ ೧ ವರ್ಷದಿಂದ ಎಷ್ಟು ಕಂದಾಯ ಅದಾಲತ್ ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ ;



(ಆ) ರೈತರ ಜಮೀನಿನ ದೋಷಪೂರಿತ ಪಹಣಿಗಳ ಶೀಘ್ರ ತಿದ್ದುಪಡಿಗೆ ತಹಶೀಲ್ದಾರರ ಮಟ್ಟದಲ್ಲಿಯೇ ಸರಿಪಡಿಸಲು ಆಯಾ ತಹಶೀಲ್ದಾರರಿಗೆ ಅಧಿಕಾರ ನೀಡಲಾಗಿದೆಯೇ ; ಇಲ್ಲದಿದ್ದ ಪಕ್ಷದಲ್ಲಿ, ಯಾವಾಗ ಅಧಿಕಾರ ನೀಡಲಾಗುವುದು ?

## ಸೌರಶಕ್ತಿ ಚಾಲಿತ ಪಂಪ್‌ಸೆಟ್‌ಗಳ ಅಳವಡಿಕೆ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೦ (೩೮೪) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರವು "ಸೂರ್ಯ ಜ್ಯೋತಿ–ರೈತ ಬಾಳು ಪರಂಜ್ಯೋತಿ" ಯೋಜನೆಯನ್ನು ಯಾವಾಗ ಪ್ರಾರಂಭ ಮಾಡಲಾಗಿದೆ ;

(ಆ) ಇಲ್ಲಿಯವರೆಗೆ ಈ ಯೋಜನೆಯಿಂದ ಎಷ್ಟು ರೈತರು ಅನುಕೂಲ ಪಡೆದುಕೊಂಡಿದ್ದಾರೆ (ವಿವರಗಳನ್ನು ನೀಡುವುದು) ;

(ಇ) ಸೌರಶಕ್ತಿ ಚಾಲಿತ ಪಂಪ್‌ಸೆಟ್‌ಗಳ ಅಳವಡಿಕೆಗೆ ಇಲ್ಲಿಯವರೆವಿಗೆ ಎಷ್ಟು ಜನ ರೈತರಿಗೆ ಸರ್ಕಾರವು ಸಹಾಯ ಧನ ನೀಡಿದೆ ?

## ಸಾರ್ವಜನಿಕ ಪ್ರದೇಶಗಳಲ್ಲಿ ಸಸ್ಯೋದ್ಯಾನ ನಿರ್ಮಾಣ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೧ (೩೩೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾರ್ವಜನಿಕ ಮತ್ತು ಪ್ರವಾಸಿಗರ ಆಕರ್ಷಣೆಯ ಸಲುವಾಗಿ ಬೆಂಗಳೂರಿನ ಹೆಣ್ಣೂರು ಪ್ರದೇಶದಲ್ಲಿ ಸಸ್ಯೋದ್ಯಾನ (Tree Park) ನಿರ್ಮಾಣ ಕಾರ್ಯವನ್ನು ಮಾಡಲಾಗಿದೆಯೇ ;

ಈ ಸಸ್ಯೋದ್ಯಾನವನ್ನು ನಿರ್ಮಾಣ ಮಾಡಲು ಸರ್ಕಾರದ ವತಿಯಿಂದ ಎಷ್ಟು ಹಣ ವ್ಯಯ ಮಾಡಲಾಗಿದೆ ; ಹಾಗೂ ಎಷ್ಟು ಹಣವನ್ನು ನಿಗದಿ ಮಾಡಲಾಗಿದೆ ;

(ಆ) ಕಳೆದ ಒಂದು ವರ್ಷದಿಂದ ಮಾನವ ಮತ್ತು ಪ್ರಾಣಿ ನಡುವೆ ಸಂಘರ್ಷ ತಡೆಗೆ ಅರಣ್ಯ ಇಲಾಖೆಯಿಂದ ರಾಜ್ಯದಲ್ಲಿ ಎಷ್ಟು ಬ್ಯಾರಿಕ್ಯಾಡ್‌ಗಳನ್ನು ಅಳವಡಿಸಲಾಗಿದೆ ;

(ಇ) ಕಳೆದ ಒಂದು ವರ್ಷದಿಂದ ಇಲ್ಲಿಯವರೆಗೆ ಈ ಬ್ಯಾರಿಕ್ಯಾಡ್‌ಗಳನ್ನು ಅಳವಡಿಸಲು ಸರ್ಕಾರದ ವತಿಯಿಂದ ಎಷ್ಟು ಹಣವನ್ನು ವ್ಯಯ ಮಾಡಲಾಗಿದೆ ; ಹಾಗೂ ಎಷ್ಟು ಹಣವನ್ನು ನಿಗದಿ ಮಾಡಲಾಗಿದೆ ;

(ಈ) ಕಳೆದ ಒಂದು ವರ್ಷದಿಂದ ವನ್ಯಮೃಗಗಳಿಂದ ಸಾವಿಗೀಡಾದ ಸಾರ್ವಜನಿಕರ ಸಂಖ್ಯೆ ಎಷ್ಟು ?

## ಕೆರೆಗಳಿಗೆ ನೀರು ತುಂಬಿಸಲು ಕೈಗೊಂಡ ಕ್ರಮಗಳು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–**

೧೭೨ (೩೩೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ಸಂಪೂರ್ಣ ಕುಸಿದಿದ್ದು ಇದನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮಗಳೇನು ;

(ಆ) ಜಿಲ್ಲೆಯ ದೊಡ್ಡ ಕೆರೆಗಳಲ್ಲಿರುವ ಹೂಳೆತ್ತಿ ಅಭಿವೃದ್ಧಿಪಡಿಸಿ ನೀರು ತುಂಬಿಸಲು ಕೈಗೊಂಡಿರುವ ಕ್ರಮಗಳೇನು ;

(ಇ) ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಬಾಣಾವರ ಹೋಬಳಿ ರಂಗನಕೆರೆ, ಬೇಲೂರಿನ ವಿಷ್ಣು ಸಮುದ್ರಕೆರೆ ಮತ್ತು ಹಾಸನದ



ಎಲ್ಲಾ ಕೆರೆಗಳಿಗೆ ನೀರು ತುಂಬಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವುದು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–**

೧೭೩ (೩೩೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಲಂಬಾಣಿ ತಾಂಡಾ, ಗೊಲ್ಲರಹಟ್ಟಿ, ನಾಯಕರಹಟ್ಟಿ, ವಡ್ಡರಹಟ್ಟಿ, ಮಜರೆ ಗ್ರಾಮ, ಹಾಡಿಗಳು, ಹ್ಯಾಮ್ಲೆಟ್ ಮತ್ತು ಕ್ಯಾಂಪ್ ಕಾಲೋನಿಗಳೆಷ್ಟು ;

(ಆ) ಸರ್ಕಾರಿ ಆದೇಶ ಸಂಖ್ಯೆ: ಕಂಇ ೪೬ ಭೂದಾಪು ೨೦೧೩, ಬೆಂಗಳೂರು, ದಿನಾಂಕ: ೨೦–೦೭–೨೦೧೩ರ ಆದೇಶದ ರೀತ್ಯಾ ೫೦ ಮನೆಗಳು ಹಾಗೂ ೨೫೦ ಜನಸಂಖ್ಯೆ ಇರುವ ಗ್ರಾಮಗಳೆಷ್ಟು ;

(ಇ) ಅರ್ಹತೆ ಇರುವ ಗ್ರಾಮಗಳನ್ನು ಸರ್ಕಾರ ಸ್ವಇಚ್ಛೆಯಿಂದ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ ಹತ್ತಿರದ ಗ್ರಾಮ ಪಂಚಾಯಿತಿಗಳಿಗೆ ಸೇರಿಸಲು ಕೈಗೊಂಡಿರುವ ಕ್ರಮಗಳೇನು ;

(ಈ) ಜಿಲ್ಲೆಯಲ್ಲಿರುವ ಈ ರೀತಿಯ ಪರಿವರ್ತನೆ ಮಾಡಬೇಕಾಗಿರುವ ಪ್ರದೇಶಗಳೆಷ್ಟು ; (ತಾಲ್ಲೂಕುವಾರು) ನೂತನ ಆದೇಶದ ರೀತ್ಯಾ ಪರಿವರ್ತನೆಗೊಂಡ ಗ್ರಾಮಗಳೆಷ್ಟು ;

(ಉ) ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದ ಗ್ರಾಮಗಳಿಗೆ ಹೆಚ್ಚಿನ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗುವುದು ?

## ಜಾವಗಲ್ ಶ್ರೀನಾಥ್ ಕ್ರೀಡಾಂಗಣದ ಅಭಿವೃದ್ಧಿ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–**

೧೭೪ (೩೩೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಜಾವಗಲ್ ಗ್ರಾಮದಲ್ಲಿ ಜಾವಗಲ್ ಶ್ರೀನಾಥ್ ಕ್ರೀಡಾಂಗಣ ಕಾಮಗಾರಿ ಪ್ರಾರಂಭವಾಗಿದ್ದು ಯಾವಾಗ ; ಇದಕ್ಕೆ ಈವರೆಗೂ ವ್ಯಯಿಸಿರುವ ಮೊಬಲಗೆಷ್ಟು ;

(ಆ) ಸದರಿ ಕ್ರೀಡಾಂಗಣದ ಕಾಮಗಾರಿ ಯಾವ ಹಂತದಲ್ಲಿರುತ್ತದೆ ; ಪೂರ್ಣಗೊಳಿಸಲು ಇರುವ ತಾಂತ್ರಿಕ ತೊಂದರೆಗಳೇನು ; ಪೂರ್ಣಗೊಳಿಸಲು ಬೇಕಾಗಿರುವ ಮೊಬಲಗೆಷ್ಟು ;

(ಇ) ಕಾಮಗಾರಿ ಅಪೂರ್ಣಗೊಂಡು ಸರ್ಕಾರದ ಹಣ ವ್ಯರ್ಥವಾಗಿ ಇಲ್ಲಿನ ಶಾಲಾ ಮಕ್ಕಳಿಗೆ ಮತ್ತು ಸಾರ್ವಜನಿಕರಿಗೆ ಉಪಯೋಗ ವಿಲ್ಲದಂತಾಗಿದ್ದು ಇದನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಮಲೆನಾಡು ಪ್ರದೇಶದಲ್ಲಿ ಆನೆ ಹಾವಳಿ ನಿಯಂತ್ರಣ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–**

೧೭೫ (೩೪೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು, ಅರಕಲಗೂಡು, ಬೇಲೂರು ಭಾಗಗಳಲ್ಲಿ ಆನೆಗಳು ಗದ್ದೆ, ಕಾಫಿ, ಬಾಳೆ ಮುಂತಾದ



ಬೆಳೆಗಳನ್ನು ನಾಶಮಾಡುತ್ತಿದ್ದು ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಆನೆ ಧಾಮ/ಆನೆ ಕಾರಿಡಾರ್ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಮಲೆನಾಡಿನಲ್ಲಿ ಆನೆಗಳ ದಾಳಿ ತಪ್ಪಿಸಲು, ಶಾಶ್ವತ ಪರಿಹಾರ ಕಂಡು ಹಿಡಿಯಲು ಮತ್ತು ಈ ಆನೆಗಳನ್ನು ಸೆರೆಹಿಡಿಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಈ ಪ್ರದೇಶಗಳಲ್ಲಿ ಆನೆ ಹಾವಳಿಯಿಂದ ಉಂಟಾಗಿರುವ ಬೆಳೆ ನಷ್ಟವೆಷ್ಟು ; ಇದನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಪಹಣಿ ವಿತರಣಾ ಕೇಂದ್ರದ ಸ್ಥಾಪನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೭೬ (೩೪೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ತಾಲ್ಲೂಕುವಾರು ಪಹಣಿ ವಿತರಣಾ ಕೇಂದ್ರಗಳಿವೆ ಮತ್ತು ಈ ಕೇಂದ್ರಗಳಲ್ಲಿ ಎಷ್ಟು ಕಂಪ್ಯೂಟರ್ ವ್ಯವಸ್ಥೆಯ ಮೂಲಕ ವಿತರಣಾ ಕಾರ್ಯ ನಡೆಯುತ್ತಿದೆ ;

(ಆ) ತಾಲ್ಲೂಕಿನಲ್ಲಿನ ಪಹಣಿ ವಿತರಣಾ ಕೇಂದ್ರಗಳಲ್ಲಿ ಪಹಣಿಗಳನ್ನು ಪಡೆಯುವಾಗ ಸರಿಯಾದ ವ್ಯವಸ್ಥೆ ಇಲ್ಲದೆ ಜನರು ಪರಿಶ್ರಮ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಪ್ರತಿ ಹೋಬಳಿ ಅಥವಾ ಗ್ರಾಮ ಪಂಚಾಯತಿಯಲ್ಲಿ ಪಹಣಿ ವಿತರಣೆ ಮಾಡುತ್ತಿರುವುದರಿಂದ ಜನರ ಸಮಸ್ಯೆಯನ್ನು ಹೋಗಲಾಡಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೇ (ಪೂರ್ಣವಾದ ವಿವರ ನೀಡುವುದು) ?

## ಮರವಂತೆ ಬಂದರಿನ ಕಾಮಗಾರಿ ವಿಳಂಬ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೭೭ (೩೪೩) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮರವಂತೆಯಲ್ಲಿ ನಿರ್ಮಾಣವಾಗುತ್ತಿರುವ ಬಂದರಿಗೆ ರಾಜ್ಯ ಸರ್ಕಾರ ಈ ವರ್ಷ (೨೦೧೪–೧೫ನೇ ಸಾಲು) ಬಿಡುಗಡೆ ಮಾಡಿದ ಅನುದಾನವೆಷ್ಟು ;

(ಆ) ಅನುದಾನ ಬಿಡುಗಡೆಯ ವಿಳಂಬದಿಂದಾಗಿ ಕಾಮಗಾರಿಯು ಸ್ಥಗಿತಗೊಂಡ ಬಗ್ಗೆ ಸರ್ಕಾರದ ಗಮನಕ್ಕಿದೆಯೇ ;

(ಇ) ಗಮನಕ್ಕಿದ್ದರೆ, ಸರ್ಕಾರ ತೆಗೆದುಕೊಂಡ ಕ್ರಮವೇನು ; ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು (ಪೂರ್ಣ ವಿವರ ನೀಡುವುದು) ?

## ವಾಸ್ತವ್ಯ ದೃಢೀಕರಣ ಪತ್ರ ನೀಡಿಕೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೭೮ (೩೪೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಾಸ್ತವ್ಯ ದೃಢೀಕರಣ ಪತ್ರವನ್ನು ಕಂದಾಯ ಇಲಾಖೆಯು ಮಾತ್ರ ನೀಡಬಹುದೆಂದು ಸರ್ಕಾರಿ ಸುತ್ತೋಲೆಯಿದೆಯೇ ; ಹಾಗಿದ್ದಲ್ಲಿ, ವಿವರ ನೀಡುವುದು ;



(ಆ) ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ವಾಸ್ತವ್ಯ ದೃಢೀಕರಣ ಪತ್ರ ನೀಡಿದರೆ ಕಾಯಿದೆ ಉಲ್ಲಂಘನೆಯಾಗುತ್ತದೆಯೇ ;

(ಇ) ಕಂದಾಯ ಇಲಾಖೆಯಲ್ಲಿ ಅನುಷ್ಠಾನಿಸುವ ಕಾರ್ಯಕ್ರಮಗಳಿಗೆ ವಾಸ್ತವ್ಯ ದೃಢೀಕರಣ ಪತ್ರವನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಂದ ಪಡೆದ ಪ್ರಕರಣವಿದೆಯೇ ;

(ಈ) ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗ್ರಾಮ ಮಟ್ಟದ ಅಧಿಕಾರಿಯಾಗಿರುವುದು ಅಭಿವೃದ್ಧಿ ಅಧಿಕಾರಿಗಳ ವಾಸ್ತವ್ಯ ದೃಢೀಕರಣ ಪತ್ರವನ್ನು ನೀಡುವುದು ಸಮರ್ಪಕವಾಗುವುದಿಲ್ಲವೇ ?

## ನಿವೇಶನ ಮಂಜೂರಾತಿ ಕೋರಿದ ಅರ್ಜಿಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೭೯ (೩೪೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೯೪ಸಿ ಪ್ರಕಾರ ನಿವೇಶನ ಮಂಜೂರಾತಿ ಕೋರಿ ಬಂದ ಅರ್ಜಿಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಹೀಗೆ ಸಲ್ಲಿಸಿದ ಅರ್ಜಿಗಳು ಯಾವ ಹಂತದಲ್ಲಿವೆ (ಪೂರ್ಣ ವಿವರ ನೀಡುವುದು) ;

(ಇ) ಕ್ರಮಬದ್ಧವಾಗಿ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ೯೪ಸಿ ಪ್ರಕಾರ ನಿವೇಶನ ಮಂಜೂರಾಗಿದೆಯೇ ;

(ಈ) ಮಂಜೂರಾಗಿದ್ದಲ್ಲಿ, ಜಿಲ್ಲಾವಾರು ಫಲಾನುಭವಿ ಸಹಿತ ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ಒದಗಿಸುವುದು ;

(ಉ) ಮಂಜೂರಾಗದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು (ಪೂರ್ಣ ವಿವರ ನೀಡುವುದು) ?

## ಭೂ ಪರಿವರ್ತನೆ ನೂತನ ಆದೇಶದಿಂದ ಸಾರ್ವಜನಿಕರಿಗೆ ತೊಂದರೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೮೦ (೩೪೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಭೂ ಪರಿವರ್ತನೆ ಮಾಡುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳ ಬಗ್ಗೆ ವಿವರ ನೀಡುವುದು ;

(ಆ) ಕೃಷಿ ಭೂಮಿಯನ್ನು ವಾಸ್ತವ್ಯದ ಉದ್ದೇಶ ಮತ್ತು ವಾಣಿಜ್ಯದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡುವಾಗ ಪ್ರತಿ ಜಿಲ್ಲೆಯಲ್ಲೂ ಜಿಲ್ಲಾಧಿಕಾರಿಗಳು ಬೇರೆ ಬೇರೆ ಮಾರ್ಗಸೂಚಿಯನ್ನು ಅಳವಡಿಸಿಕೊಳ್ಳುವುದು ಸರಿಯೇ ;

(ಇ) ಉಡುಪಿ ಜಿಲ್ಲೆಯಲ್ಲಿ ಪ್ರತಿ ೧ ಸೆಂಟ್ಸ್ ಕೃಷಿ ಭೂಮಿಯನ್ನು ವಾಸ್ತವ್ಯದ ಉದ್ದೇಶ ಮತ್ತು ವಾಣಿಜ್ಯದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡುವಾಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಅಗತ್ಯ ಎನ್ನುವ ಜಿಲ್ಲಾಧಿಕಾರಿಯವರ ಆದೇಶ ಸರ್ಕಾರದ ಗಮನಕ್ಕಿದೆಯೇ ;

(ಈ) ಈ ರೀತಿಯ ಆದೇಶದಿಂದ ಜನಸಾಮಾನ್ಯರಿಗೆ ತೊಂದರೆಯಾದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮ ಯಾವುದು ?



## ನಿವೃತ್ತ ನೌಕರರಿಗೆ ನಿವೇಶನ ಹಂಚಿಕೆ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೧೮೧ (೩೫೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ದಿನಾಂಕ: ೧೯–೪–೨೦೦೬ರ ಸರ್ಕಾರಿ ಆದೇಶದನ್ವಯ ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬಿಡಿಎ ನೌಕರರಿಗೆ ನಿವೇಶನಗಳನ್ನು ಹಂಚಿರುವುದು ನಿಜವೇ ; ಹಾಗಿದ್ದಲ್ಲಿ, ಎಷ್ಟು ನೌಕರ ಸದಸ್ಯರುಗಳಿಗೆ ಯಾವ ಅಳತೆಯುಳ್ಳ ನಿವೇಶನಗಳನ್ನು ಎಲ್ಲೆಲ್ಲಿ ವಿತರಿಸಲಾಗಿದೆ (ನೌಕರ ಸದಸ್ಯರ ಹೆಸರು, ಸದಸ್ಯತ್ವ ಸಂಖ್ಯೆ, ನಿವೇಶನಕ್ಕಾಗಿ ಪಡೆದ ಮೌಲ್ಯ ಮತ್ತು ನಿವೇಶನ ವಿತರಿಸಿದ ದಿನಾಂಕವಾರು ಮಾಹಿತಿಗಳನ್ನು ನೀಡುವುದು) ;

(ಆ) ಬಿಡಿಎ ನೌಕರರಲ್ಲದೇ ಇತರ ಎರವಲು ಸೇವೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದವರು, ಬೇರೆ ಇಲಾಖೆಗಳ ನೌಕರರು ಮತ್ತು ಸಾರ್ವಜನಿಕರಿಗೆ ನಿವೇಶನಗಳನ್ನು ವಿತರಿಸಲಾಗಿದೆಯೇ ; ಹಾಗಿದ್ದಲ್ಲಿ, ಅವರ ಹೆಸರು, ಸದಸ್ಯತ್ವ ಸಂಖ್ಯೆ, ನಿವೇಶನಕ್ಕಾಗಿ ಪಡೆದ ಮೌಲ್ಯ ಮತ್ತು ನಿವೇಶನ ವಿತರಿಸಿದ ದಿನಾಂಕವಾರು ಮಾಹಿತಿಗಳನ್ನು ನೀಡುವುದು ಮತ್ತು ಇದಕ್ಕೆ ಸಂಘದ ಬೈಲಾದಲ್ಲಾಗಲೀ ಅಥವಾ ಸರ್ಕಾರದಿಂದಾಗಲೀ ಅಥವಾ ಪ್ರಾಧಿಕಾರದ ಸಭೆಯ ಅನುಮತಿ ಪಡೆಯಲಾಗಿದೆಯೇ (ಅದರ ಪ್ರತಿ ನೀಡುವುದು) ;

(ಇ) ನಿವೇಶನ ವಿತರಿಸುವ ಸಲುವಾಗಿ ಬಿಡಿಎ ನಿವೃತ್ತ ನೌಕರರಿಂದ ಸದಸ್ಯತ್ವವನ್ನು ಪಡೆದಿರುವುದು ನಿಜವೇ ; ಹಾಗಿದ್ದಲ್ಲಿ, ಒಟ್ಟು

ಸದಸ್ಯತ್ವ ಪಡೆದಿರುವ ನಿವೃತ್ತ ನೌಕರರ ವಿವರ ಮತ್ತು ನಿವೇಶನಗಳನ್ನು ವಿತರಿಸಿರುವ ಸದಸ್ಯರ ವಿವರಗಳನ್ನು ನೀಡುವುದು ;

(ಈ) ಇನ್ನೂ ನಿವೇಶನಗಳನ್ನು ವಿತರಿಸಬೇಕಾದ ನಿವೃತ್ತ ನೌಕರ ಸದಸ್ಯರುಗಳು ಎಷ್ಟು ; ಅವರುಗಳ ಮಾಹಿತಿ ಒದಗಿಸುವುದು ; ಅವರಿಗೆ ನಿವೇಶನ ವಿತರಿಸಲಾಗುತ್ತದೆಯೇ ; ಇಲ್ಲದಿದ್ದಲ್ಲಿ, ಅವರಿಗೆ ಅನ್ಯಾಯವಾಗದಂತೆ ಸರ್ಕಾರ ಕೈಗೊಳ್ಳುವ ಕ್ರಮವೇನು ?

## ಜಲಸಾರಿಗೆಗಳು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೧೮೨ (೩೪೬) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಒಳನಾಡು ಜಲಸಾರಿಗೆ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಯಾವ ಯಾವ ಭಾಗದಲ್ಲಿ ಜಲಸಾರಿಗೆ ಜಾರಿಯಲ್ಲಿದೆ ; ಇದರ ಲಾಭ ಪಡೆಯುತ್ತಿರುವ ಪ್ರದೇಶ ಯಾವುವು ; ಈ ಸಾರಿಗೆಯಿಂದ ರಾಜ್ಯದಲ್ಲಿ ಒಟ್ಟು ಎಷ್ಟು ಪ್ರಮಾಣದ ಸಾಗಾಟ ನಡೆದಿದೆ, ಎಷ್ಟು ಹಡಗುಗಳನ್ನು ರಾಜ್ಯ ಸರ್ಕಾರ ಹಾಗೂ ಎಷ್ಟು ಹಡಗುಗಳನ್ನು ಖಾಸಗಿಯವರು ನಡೆಸುತ್ತಿದ್ದಾರೆ (ವಿವರ ನೀಡುವುದು) ;

(ಆ) ರಾಜ್ಯದ ಯಾವ ಯಾವ ನದಿಗಳಲ್ಲಿ ಮತ್ತು ಕಡಲ ತೀರದ ಪ್ರದೇಶಗಳಲ್ಲಿ ಜಲಸಾರಿಗೆಯನ್ನು ಮತ್ತಷ್ಟು ಜಾರಿಗೊಳಿಸುವ ಯೋಜನೆ ಇದೆ, ಈ ಯೋಜನೆಯ ಅಂದಾಜು ವೆಚ್ಚವೆಷ್ಟು, ಈ ವರ್ಷದ ಆಯವ್ಯಯದಲ್ಲಿ ಎಷ್ಟು ಹಣ ಮೀಸಲಿರಿಸಲಾಗಿದೆ ?



## ಅರಣ್ಯಗಳ ವರ್ಗೀಕರಣ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೧೮೩ (೩೪೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ರಾಷ್ಟ್ರೀಯ ಉದ್ಯಾನವನ, ಅಭಯಾರಣ್ಯಗಳು, ಸಂರಕ್ಷಿತ ಅರಣ್ಯಗಳ ವಿವರ ನೀಡುವುದು ; (ಘೋಷಣೆಯ ದಿನಾಂಕ, ವಿಸ್ತೀರ್ಣ, ಜಲಸೂತ್ರಗಳ ಸಂಖ್ಯೆ, ಗಣತಿಯಂತೆ ಅಲ್ಲಿರುವ ವಿವಿಧ ವನ್ಯಜೀವಿ ಪ್ರಾಣಿಗಳ ಸಂಖ್ಯೆ, ವಿವಿಧ ದರ್ಜೆಯ ಅಧಿಕಾರಿಗಳು ವನಪಾಲಕರು ಮತ್ತು ಹಂಗಾಮಿ ವನಪಾಲಕರ ಸಂಖ್ಯೆ, ಅಲ್ಲಿರುವ ವಾಹನಗಳ ಸಂಖ್ಯೆ (ಸಫಾರಿ ವಾಹನಗಳನ್ನು ಹೊರತುಪಡಿಸಿ) ವಿವಿಧ ರೀತಿಯ ಶಸ್ತ್ರಾಸ್ತ್ರಗಳ ಸಂಖ್ಯೆ ಮುಂತಾದ ವಿವರ ನೀಡುವುದು) ಇವುಗಳ ವಿಂಗಡಣೆಯ ನಿಬಂಧನೆಗಳೇನು ;

(ಆ) ಇನ್ನು ಯಾವ ಯಾವ ಕಾಡು ಪ್ರದೇಶಗಳನ್ನು ರಾಷ್ಟ್ರೀಯ ಉದ್ಯಾನವನ, ಅಭಯಾರಣ್ಯಗಳು, ಸಂರಕ್ಷಿತ, ಅರಣ್ಯಗಳೆಂದು ಘೋಷಣೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ ; ಈ ಪ್ರತಿಯೊಂದು ಪ್ರಕರಣದ ಕಡತವು ಎಷ್ಟು ಕಾಲದಿಂದ ಯಾವ ಹಂತದಲ್ಲಿ ನೆನೆಗುದಿಗೆ ಬಿದ್ದಿದೆ (ಪ್ರಕರಣವಾರು ವಿವರ ನೀಡುವುದು) ;

(ಇ) ರಾಜ್ಯಾದ್ಯಂತ ಹುಲಿ, ಚಿರತೆ, ಆನೆ, ಕಡವೆ, ಜಿಂಕೆ ಮುಂತಾದ ವನ್ಯಮೃಗಗಳ ಬೇಟೆಯ ಎಷ್ಟು ಪ್ರಕರಣಗಳು ಕಳೆದ ಎರಡು ವರ್ಷಗಳಲ್ಲಿ ವರದಿಯಾಗಿದೆ ಎಷ್ಟು ಜನ ಬೇಟೆಗಾರರನ್ನು ಬಂಧಿಸಲಾಗಿದೆ ; ಎಷ್ಟು ಪ್ರಕರಣಗಳಲ್ಲಿ ಮೊಕದ್ದಮೆ ಹೂಡಲಾಗಿದೆ (ಪ್ರಕರಣವಾರು ವಿವರ ನೀಡುವುದು) ;

(ಈ) ಅರಣ್ಯ ಸಂಪತ್ತಿನ ಲೂಟಿಯನ್ನು ತಪ್ಪಿಸಲು ಕಳೆದ ಎರಡು ವರ್ಷಗಳಲ್ಲಿ ಅರಣ್ಯ ಸಿಬ್ಬಂದಿಗಳಿಗೆ ಒದಗಿಸಿರುವ ವಾಹನಗಳ ಆಧುನಿಕ ಶಸ್ತ್ರಾಸ್ತ್ರಗಳ ಮತ್ತು ವಿವಿಧ ತರಬೇತಿಯ ವಿವರಗಳೇನು ?

## ಕರ್ನಾಟಕ ಭೂ ಸುಧಾರಣಾ ಕಾಯಿದೆ ಕಲಂ ೭೯(ಎ) ಮತ್ತು (ಬಿ) ನಿಯಮಗಳು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೧೮೪ (೩೫೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಾದ್ಯಂತ ಕೃಷಿ ಭೂಮಿಯ ಉಪನೋಂದಣಾಧಿಕಾರಿ ಕಛೇರಿಯ ಪ್ರತಿ ಎಕರೆಗೆ ಮಾರ್ಗದರ್ಶಿ ಬೆಲೆಯ ಕನಿಷ್ಠ ಮತ್ತು ಗರಿಷ್ಠ ಬೆಲೆಯ ವಿವರಗಳನ್ನು (ಜಿಲ್ಲಾವಾರು) ನೀಡುವುದು) ;

(ಆ) ರಾಜ್ಯಾದ್ಯಂತ ಕಳೆದ ಎರಡು ವರ್ಷಗಳಲ್ಲಿ ಕರ್ನಾಟಕ ಭೂ ಸುಧಾರಣಾ ಕಾಯಿದೆ ಕಲಂ ೭೯(ಎ) ಮತ್ತು (ಬಿ) ಗಳ ಉಲ್ಲಂಘನೆಯ ಎಷ್ಟು ಪ್ರಕರಣಗಳಲ್ಲಿ ನೋಟೀಸ್ ನೀಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು) ; ಈ ರೀತಿ ನೋಟೀಸ್ ನೀಡಲಾದ ಎಷ್ಟು ಪ್ರಕರಣಗಳು ಈ ಎರಡು ವರ್ಷಗಳಲ್ಲಿ ಇತ್ಯರ್ಥವಾಗಿವೆ ; ಎಷ್ಟು ಪ್ರಕರಣಗಳಲ್ಲಿ ಈ ಕಲಂಗಳ ಉಲ್ಲಂಘನೆ ಸಾಬೀತಾಗಿದೆ ; ಉಳಿದಂತೆ ಎಷ್ಟು ಪ್ರಕರಣಗಳಲ್ಲಿ ಭೂಮಿ ಖರೀದಿ ವಿವರಣೆಯನ್ನು ಒಪ್ಪಿಕೊಂಡು ಖಾತಾ ಮಾಡಿಕೊಡಲು ಆದೇಶ ನೀಡಲಾಯಿತು ; ತೀರ್ಮಾನವಾಗದೇ ಉಳಿದಿರುವ ಪ್ರಕರಣಗಳು ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಇ) ಈ ಅಧಿನಿಯಮದಂತೆ ಹಾಲಿಯಿರುವ ಕೃಷಿಯೇತರ ವರಮಾನದ ಮಿತಿಯನ್ನು ಹೆಚ್ಚಿಸುವ ಇಲ್ಲವೇ ಮಿತಿಯನ್ನು ತೆಗೆದುಹಾಕುವ ಯೋಚನೆ ಸರ್ಕಾರದ ಮುಂದಿದೆಯೇ ?



## ಅಣೆಕಟ್ಟುಗಳಿಗೆ ಹೊಂದಿಕೊಂಡಂತಿರುವ ಅಚ್ಚುಕಟ್ಟು ಪ್ರದೇಶದ ಕೆರೆಗಳು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೧೮೫ (೩೫೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು, ಹಾಸನ, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಇರುವ ಅಣೆಕಟ್ಟುಗಳಿಗೆ ಹೊಂದಿಕೊಂಡಂತಿರುವ ಅಚ್ಚುಕಟ್ಟು ಪ್ರದೇಶದ ಯಾವ ಯಾವ ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತಿದೆ (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) ;

(ಆ) ಇದೇ ಯೋಜನೆಯಡಿ ಇನ್ನೂ ಯಾವ ಯಾವ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಜಾರಿಗೊಳಿಸಬೇಕಾಗಿದೆ (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) ;

(ಇ) ಈ ಯೋಜನೆಯನ್ನು ಪರಿಪೂರ್ಣವಾಗಿ ಯಾವಾಗ ಜಾರಿಗೊಳಿಸಲಾಗುವುದು ?

## ಚೆಕ್ ಡ್ಯಾಂ ನಿರ್ಮಾಣದಿಂದಾಗಿ ರಾಜ್ಯಕ್ಕಾಗುವ ತೊಂದರೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೮೬ (೩೫೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ತೆಲಂಗಾಣ ರಾಜ್ಯವು ಕಾಗಿಣಾ ನೀರನ್ನು ಕಬಳಿಸಲು ಪ್ರಯತ್ನಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇದ್ದಲ್ಲಿ, ತಾಂಡೂರ ಬಳಿ ಆ ರಾಜ್ಯವು ಚೆಕ್ ಡ್ಯಾಂ ನಿರ್ಮಿಸುತ್ತಿರುವುದು ನಿಜವೇ ;

(ಇ) ಚೆಕ್ ಡ್ಯಾಂ ನಿರ್ಮಾಣದಿಂದಾಗಿ ರಾಜ್ಯದ ಗಡಿ ಗ್ರಾಮಗಳಲ್ಲಿ ನೀರಿನ ತೊಂದರೆಯಾಗುವುದು ಸರ್ಕಾರದ ಗಮನದಲ್ಲಿದೆಯೇ ; ಇದ್ದಲ್ಲಿ, ಈ ಕುರಿತು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಹೊಸ ತಾಲ್ಲೂಕುಗಳ ರಚನೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೮೭ (೩೫೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಿಂದಿನ ಸರ್ಕಾರದ ಜನಪ್ರಿಯ ಯೋಜನೆಗಳಲ್ಲಿ ಒಂದಾದ ಹೊಸ ತಾಲ್ಲೂಕುಗಳ ರಚನೆಯ ಯೋಜನೆಯ ಪ್ರಸ್ತಾಪ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಯಾವಾಗ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತದೆ ;

(ಆ) ಹೊಸ ತಾಲ್ಲೂಕುಗಳ ರಚನೆಗೆ ಯಾವ ಪ್ರದೇಶಗಳನ್ನು ಗುರುತಿಸಲಾಗಿದೆ ; ಗುರುತಿಸಿರುವ ಪ್ರದೇಶದ ಹೆಸರು ಮತ್ತು ಜಿಲ್ಲಾವಾರು ವಿವರ ನೀಡುವುದು ಹಾಗೂ ಈ ಯೋಜನೆಗೆ ಸರ್ಕಾರ ಮೀಸಲಿಟ್ಟಿರುವ ಅನುದಾನವೆಷ್ಟು ಮತ್ತು ಪ್ರತಿ ತಾಲ್ಲೂಕು ರಚನೆಗೆ ಅವಶ್ಯವಿರುವ ವೆಚ್ಚದ ವಿವರ ನೀಡುವುದು ;

(ಇ) ಪ್ರಸ್ತುತ ಸರ್ಕಾರ ಬಂದಾಗಿನಿಂದಲೂ ಈ ಯೋಜನೆಯನ್ನು ಪ್ರಸ್ತಾಪಿಸುತ್ತಿದ್ದರೂ ಜಾರಿಗೆ ಮಾತ್ರ ತಂದಿಲ್ಲ ; ಯೋಜನೆ ಜಾರಿಗೆ ತರಲು ಸರ್ಕಾರದಲ್ಲಿ ಸಾಕಷ್ಟು ಬಂಡವಾಳದ ಕೊರತೆಯಿದೆ



ಎಂಬ ಸಾರ್ವಜನಿಕರ ಊಹೆ ಸರಿಯಾಗಿದೆಯೇ ; ಈಗಿನ ಈ ವಿಳಂಬ ಧೋರಣೆಗೆ ಕಾರಣವೇನು ?

## ಅರಣ್ಯ ಪ್ರದೇಶದಲ್ಲಿ ಸಿಗುವ ವಾಣಿಜ್ಯ ಬೆಳೆಗಳು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೮೮ (೩೫೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಕೆಲ ಜಿಲ್ಲೆಗಳ ಅರಣ್ಯ ಪ್ರದೇಶದಲ್ಲಿ ಸ್ಥಳೀಯವಾಗಿ ಜನರು ಕರೆಯಲ್ಪಡುವ ಉಪ್ಪಾಗಿ ಅಥವಾ ಉಪ್ಪಂಗಿಯ ಹಣ್ಣು ಮತ್ತು ಕಾಯಿಗಳನ್ನು ಸಂಗ್ರಹಿಸಿ ತಂದು ಒಣಗಿಸಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕಾಡು ಬೆಳೆಗೆ ಸರ್ಕಾರ ನೀಡಿರುವ ಮತ್ತು ಇದರ ವೈಜ್ಞಾನಿಕ ಹೆಸರೇನು ;

(ಆ) ಈ ಬೆಳೆಯನ್ನು ನಮ್ಮ ರಾಜ್ಯದಲ್ಲಿಯೇ ಬಳಸಲಾಗುತ್ತಿದೆಯೇ ಅಥವಾ ಪರ ರಾಜ್ಯ ಮತ್ತು ಪರ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತಿದೆಯೇ ; ಇದರ ಬಳಕೆಯ ವಿವರ ನೀಡುವುದು ;

(ಇ) ಮೇಲ್ಕಂಡ ಅರಣ್ಯ ಬೆಳೆಯು ರಾಜ್ಯದ ಯಾವ್ಯಾವ ಜಿಲ್ಲೆಗಳಲ್ಲಿ ದೊರೆಯುತ್ತಿದೆ (ತಾಲ್ಲೂಕುವಾರು ವಿವರ ನೀಡುವುದು) ಒಟ್ಟಾರೆ ರಾಜ್ಯದಲ್ಲಿ ಎಷ್ಟು ಪ್ರಮಾಣದ ಬೆಳೆ ಸಿಗುತ್ತಿದೆ ; ಇದರಿಂದ ಬೆಳೆಯು ಫಸಲು ಪಡೆಯುತ್ತಿರುವವರಿಗೆ ಸರ್ಕಾರದ ನಿರ್ದೇಶನವೇನು ; ಉಪ್ಪಾಗಿ (ಉಪ್ಪಂಗಿ) ಬೆಳೆಯ ಸಂಗ್ರಹದಿಂದ ಸರ್ಕಾರಕ್ಕೆ ಆದಾಯವಿದೆಯೇ ; ಇದಕ್ಕೆ ಸಂಬಂಧಿಸಿದಂತೆ ಅರಣ್ಯ ಸಂರಕ್ಷಕರು ವಿಧಿಸಿರುವ ಮಾನದಂಡಗಳೇನು ; ಇದರಿಂದಾಗುವ ಅರಣ್ಯ ನಾಶ ತಡೆಯಲು ಕ್ರಮ ಕೈಗೊಳ್ಳಲಾಗಿದೆಯೇ ;

(ಈ) ರಾಜ್ಯದಲ್ಲಿ ಈ ಬೆಳೆಯ ವಾರ್ಷಿಕ ವಹಿವಾಟು ಎಷ್ಟು (ಇದರ ಅನುಕೂಲ–ಅನಾನುಕೂಲಗಳನ್ನು ತಿಳಿಸುವುದು) ;

(ಉ) ಇದೇ ತರಹ ಅರಣ್ಯದಲ್ಲಿ ಇನ್ನೂ ಯಾವ್ಯಾವ ಕಾಡು ಬೆಳೆಗಳನ್ನು ಸಂಗ್ರಹಿಸಿ ಮಾರಾಟ ಮಾಡಲಾಗುತ್ತದೆ ಹಾಗೂ ಯಾವ್ಯಾವ ಪ್ರದೇಶದಲ್ಲಿ ದೊರೆಯುತ್ತದೆ (ತಾಲ್ಲೂಕುವಾರು ವಿವರ ನೀಡುವುದು) ;

(ಊ) ಇವುಗಳಿಗೆ ಸರ್ಕಾರ ಯಾವುದಾದರೂ ನಿಬಂಧನೆ ವಿಧಿಸಿದೆಯೇ; ಇವುಗಳಿಂದ ವಾರ್ಷಿಕ ವಹಿವಾಟು ವಿವರ ತಿಳಿಸುವುದು (ಉದಾ: ಅಳಲೆಕಾಯಿ, ಲವಂಗ, ದಾಲ್ಚಿನ್ನಿ, ಸೊರಗಿ ಮೊಕ್ಕೆ, ಮುರುಗಲು ಕಾಯಿ (ಕೋಕಮ್), ಜೇನು ತುಪ್ಪ, ರಾಮಪತ್ರೆ, ಓಟೆ ಹುಳಿ, ಇತ್ಯಾದಿ) ;

(ಋ) ಈ ಎಲ್ಲಾ ಪದಾರ್ಥಗಳ ಉಪಯೋಗ ಮತ್ತು ಯಾವ ಪ್ರದೇಶದಲ್ಲಿ ಉಪಯೋಗಿಸಲಾಗುತ್ತದೆ ?

## ಡಾ. ಕಸ್ತೂರಿ ರಂಗನ್ ವರದಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೮ (೩೫೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಡಾ. ಕಸ್ತೂರಿ ರಂಗನ್ ವರದಿ ಪ್ರಕಾರ ಪಶ್ಚಿಮಘಟ್ಟ ಸಂರಕ್ಷಿತ ವಲಯ ಎಂದು ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯ ಘೋಷಿಸಲು ಸಿದ್ಧತೆ ಮಾಡಿಕೊಂಡಿದೆ ; ಇದರಿಂದ ಆ ಪ್ರದೇಶದಲ್ಲಿ ವಾಸಿಸುವ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;



(ಆ) ಹಾಗಿದ್ದಲ್ಲಿ, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಜೊತೆ ಈ ಕುರಿತು ಚರ್ಚಿಸಿದೆಯೇ ;

(ಇ) ರಾಜ್ಯದ ಎಷ್ಟು ಜಿಲ್ಲೆಗಳು ಈ ವರದಿಯಲ್ಲಿ ಒಳಪಡುತ್ತವೆ ಮತ್ತು ಎಷ್ಟು ಗ್ರಾಮಗಳು ಹಾಗೂ ಎಷ್ಟು ಹೆಕ್ಟೇರ್ ವಿಸ್ತೀರ್ಣ ಪ್ರದೇಶ ಒಳಪಡುತ್ತದೆ ; (ಜಿಲ್ಲಾವಾರು ವಿವರಣೆ ನೀಡುವುದು) ;

(ಈ) ಬೆಳಗಾವಿ ಜಿಲ್ಲೆಯ ಎಷ್ಟು ಗ್ರಾಮಗಳು ಇದರಲ್ಲಿ ಸೇರ್ಪಡೆಯಾಗಿವೆ ಮತ್ತು ಅವು ಯಾವುವು ;

(ಉ) ಇದರ ಸಾಧಕ ಬಾಧಕಗಳ ಕುರಿತು ಸರ್ಕಾರವು ಸಾರ್ವಜನಿಕರೊಂದಿಗೆ ಚರ್ಚಿಸಿದೆಯೇ ; ಈ ವಿಚಾರವಾಗಿ ಸರ್ಕಾರದ ಮುಂದಿನ ಕ್ರಮಗಳೇನು ?

## ಹನಿ ನೀರಾವರಿ ಯೋಜನೆಯ ಜಾರಿ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೦ (೪೩೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ನೀರಾವರಿ ಇಲಾಖೆ ವತಿಯಿಂದ ಹನಿ ನೀರಾವರಿ ಯೋಜನೆಗಳನ್ನು ಜಾರಿಗೆ ತರುವ ವಿಚಾರ ಸರ್ಕಾರದ ಮುಂದೆ ಇದೆಯೇ ;

(ಆ) ಹಾಗಿದ್ದಲ್ಲಿ, ಸರ್ಕಾರ ಯೋಜಿಸಿರುವ ಯೋಜನೆಯ ರೂಪರೇಷೆಗಳು ಏನು ;

(ಇ) ಇದರಿಂದ ರಾಜ್ಯದ ರೈತರಿಗೆ ವಿಶೇಷವಾಗಿ ಕಬ್ಬು ಬೆಳೆಗಾರರಿಗೆ ಆರ್ಥಿಕವಾಗಿ ಯಾವ ರೀತಿಯಲ್ಲಿ ಸಹಕಾರಿ ಆಗಲಿದೆ ;

(ಈ) ಈ ಯೋಜನೆಯಿಂದ ಒಟ್ಟು ಎಷ್ಟು ಟಿ.ಎಂ.ಸಿ. ನೀರು ಉಳಿತಾಯ ಆಗಲಿದೆ ;

(ಉ) ಈಗಾಗಲೇ ಕಾಲುವೆ ನೀರಾವರಿ Flow Irrigation ನಮ್ಮಲ್ಲಿ ಜಾರಿಯಿದ್ದು, ಈ ಕ್ಷೇತ್ರವನ್ನು ಹನಿ ನೀರಾವರಿ ಕ್ಷೇತ್ರವನ್ನಾಗಿ ಪರಿವರ್ತಿಸಲು ಯಾವ ಕ್ರಮ ಜರುಗಿಸಲಾಗುವುದು ?

## ಒಳಾ ಕ್ರೀಡಾಂಗಣ ನಿರ್ಮಾಣ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೯೧ (೩೬೦) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ಮಂಡ್ಯ ನಗರದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಕಾಮಗಾರಿಯು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ಕ್ರೀಡಾಂಗಣವನ್ನು ಇಲಾಖಾ ವತಿಯಿಂದಲೇ ಪೂರ್ಣಗೊಳಿಸಲಾಗುವುದೆಂದು ಕಳೆದ ಅಧಿವೇಶನದಲ್ಲಿ ಸರ್ಕಾರದಿಂದ ಭರವಸೆ ನೀಡಿದ್ದು, ಕಾಮಗಾರಿಯನ್ನು ಇದುವರೆವಿಗೂ ಪ್ರಾರಂಭಿಸದಿರಲು ಕಾರಣಗಳೇನು ;

(ಇ) ಹಾಗಿದ್ದಲ್ಲಿ, ಯಾವಾಗ ಒಳಾಂಗಣ ಕ್ರೀಡಾಂಗಣ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ?



## ಶಿಂಷಾ ನದಿಗೆ ಬ್ಯಾರೇಜ್ ನಿರ್ಮಾಣ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೨ (೩೬೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಿಂಷಾ ನದಿಗೆ ತುಮಕೂರು ಮತ್ತು ಮಂಡ್ಯ ಜಿಲ್ಲೆಯಲ್ಲಿ ಎಲ್ಲೆಲ್ಲಿ ಬ್ಯಾರೇಜ್ ನಿರ್ಮಿಸಲಾಗಿದೆ ; ಯಾವ ಯಾವ ಬ್ಯಾರೇಜ್‌ಗಳು ನಿರ್ಮಾಣದ ಹಂತದಲ್ಲಿವೆ ; ಇನ್ನೂ ಕಾಮಗಾರಿಗಳು ಆರಂಭವಾಗಬೇಕಾದ ಕಾಮಗಾರಿಗಳು ಯಾವುವು ; ನಿರ್ಮಾಣ ಹಂತದಲ್ಲಿರುವ ಮತ್ತು ನಿರ್ಮಾಣವಾಗಬೇಕಾದ ಬ್ಯಾರೇಜ್ ಕಾಮಗಾರಿಗಳಿಗೆ ಒದಗಿಸಿರುವ ಆಯವ್ಯಯ ಎಷ್ಟು ;

(ಆ) ಶಿಂಷಾ ನದಿಗೆ ಇತಿಹಾಸ ಪ್ರಸಿದ್ಧವಾದ ಮದ್ದೂರು ವೈದ್ಯನಾಥಪುರ ಕ್ಷೇತ್ರದ ದೇವಾಲಯದ ಬಳಿ ಒಂದು ಬ್ಯಾರೇಜ್ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ; ಅಥವಾ ಈಗಿರುವ ಸೇತುವೆಯನ್ನೇ ಬ್ರಿಡ್ಜ್ ಕಮ್ ಬ್ಯಾರೇಜ್ ಆಗಿ ನಿರ್ಮಿಸಲು ಕ್ರಮ ತೆಗೆದುಕೊಂಡು ಈ ಕ್ಷೇತ್ರಕ್ಕೆ ಬರುವ ಭಕ್ತಾದಿಗಳಿಗೆ ಸ್ನಾನ ಮೊದಲಾದ ನೀರಿನ ಸೌಲಭ್ಯ ಕಲ್ಪಿಸಿಕೊಡಲು ಕ್ರಮ ತೆಗೆದುಕೊಳ್ಳಲಾಗುವುದೇ ;

(ಇ) ಶಿಂಷಾ ನದಿಯಲ್ಲಿ ನೀರಿನ ಹರಿವು ಕಡಿಮೆ ಆಗಿದ್ದು, ಬ್ಯಾರೇಜ್‌ಗಳಲ್ಲಿ ನೀರಿನ ಸಂಗ್ರಹ ಕಡಿಮೆ ಆಗುತ್ತಿದ್ದು, ಈ ನದಿಯನ್ನು ಪುನರುಜ್ಜೀವನಗೊಳಿಸಲು ಮತ್ತು ಈ ನದಿಯ ಜಲಾನಯನ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

## ಶಿಂಷಾ ನದಿಯ ಎಡ ಬಲ ಭಾಗದ ಕೆರೆಗಳಿಗೆ ನೀರು ತುಂಬುವುದು.

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೩ (೩೫೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯ ಮದ್ದೂರು ತಾ. ಶಿಂಷಾ ನದಿ ಎಡಭಾಗದಲ್ಲಿ ಬರುವ ೮ ರಿಂದ ೧೦ ಗ್ರಾಮಗಳು ಮತ್ತು ಬಲದಂಡೆಯಲ್ಲಿ ಬರುವ ೪ ಗ್ರಾಮಗಳ ಕೆರೆಗಳಿಗೆ ಶಿಂಷಾ ನದಿಯಿಂದ ನೀರು ತುಂಬಿಸಲು ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಶಿಂಷಾ ನದಿಯ ಎಡ ಮತ್ತು ಬಲ ಭಾಗದ ಕೆರೆಗಳಿಗೆ ನೀರು ತುಂಬಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು (ಪೂರ್ಣ ಮಾಹಿತಿ ನೀಡುವುದು) ?

## ನೀರಾವರಿ ಸೌಡಿಗಳ ಸೇವೆ.

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೯೪ (೩೬೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ನೀರಾವರಿ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸೌಡಿ (ಹೆವಿ ಮಜ್ದೂರ್ಸ್) ಗಳ ಸಂಖ್ಯೆ ಎಷ್ಟು ;

(ಆ) ಈ ನೌಕರರುಗಳು ಎಷ್ಟು ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಸೌಡಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ; ಪ್ರಸ್ತುತ ಪಡೆಯುತ್ತಿರುವ ವೇತನ ಹಾಗೂ ಇನ್ನಿತರೆ ಭತ್ಯೆಗಳ ವಿವರ ನೀಡುವುದು ;



(ಇ) ಈ ನೌಕರರುಗಳನ್ನು ಖಾರ್ಯಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಈ) ಹಾಗಿದ್ದಲ್ಲಿ, ಯಾವಾಗ ಖಾಯಂಗೊಳಿಸಲಾಗುವುದು ;

(ಉ) ಈ ನೌಕರರುಗಳನ್ನು ಖಾಯಂಗೊಳಿಸಿದ ಮೇಲೆ ಸರ್ಕಾರಿ ನೌಕರರಿಗೆ ನೀಡುವ ಎಲ್ಲಾ ಸೌಲಭ್ಯಗಳನ್ನು ನೀಡಲಾಗುವುದೇ (ವಿವರಗಳನ್ನು ನೀಡುವುದು) ?

## ಯಾಂತ್ರೀಕೃತ ಮೀನುಗಾರರ ದೋಣಿಗಳು.

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):–**

೧೯೫ (೩೬೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಯಾಂತ್ರೀಕೃತ ಮೀನುಗಾರರ ದೋಣಿಗಳಿವೆ ; ರಾಜ್ಯದ ಮೀನಿನ ಉತ್ಪಾದನೆ ಎಷ್ಟು ಮೆಟ್ರಿಕ್ ಟನ್ ;

(ಆ) ರಾಜ್ಯದಿಂದ ಮೀನಿನ ಉತ್ಪನ್ನಗಳನ್ನು ಇತರ ರಾಜ್ಯಗಳಿಗೆ ಮತ್ತು ದೇಶಗಳಿಗೆ ರಫ್ತು ಆಗುತ್ತಿದೆಯೇ (ವಿವರಣೆ ನೀಡುವುದು) ;

(ಇ) ಮೀನು ಸಂಸ್ಕರಣಾ ಕೇಂದ್ರದಲ್ಲಿ ಶೀತಲೀಕರಿಸಿದ ಮೀನು ಮತ್ತು ಮೀನಿನ ಉತ್ಪನ್ನಗಳನ್ನು ತಯಾರಿಸಿ ವಿದೇಶಗಳಿಗೆ ರಫ್ತು ಮಾಡಲು ಖಾಸಗಿ ಸಹಭಾಗಿತ್ವದಲ್ಲಿ ಯೋಜನೆ ರೂಪಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ (ವಿವರ ನೀಡುವುದು) ;

(ಈ) ಕರಾವಳಿ ಕರ್ನಾಟಕದ ಮೀನುಗಾರರಿಗೆ ಸೀಮೆಎಣ್ಣೆ ಸಬ್ಸಿಡಿ ನೀಡಲು ರಾಜ್ಯ ಸರ್ಕಾರ ವಿನಿಯೋಗಿಸುವ ಸಬ್ಸಿಡಿ ಎಷ್ಟು ;

ಎಷ್ಟು ಪರ್ಮಿಟುದಾರರಿಗೆ ಈ ಯೋಜನೆಯ ಫಲಾನುಭವಿಗಳು ಆಗಿರುತ್ತಾರೆ ; ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು (ವಿವರ ನೀಡುವುದು) ;

(ಉ) ಕರಾವಳಿ ಜಿಲ್ಲೆಯ ಮಂಗಳೂರು, ಉಡುಪಿ, ಮಲ್ಪೆ, ಹೊನ್ನಾವರ, ಗಂಗೊಳ್ಳಿ, ಕಾರವಾರ ಬಂದರುಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; ಇದ್ದರೆ ಯಾವ ಹಂತದಲ್ಲಿದೆ ;

(ಊ) ರಾಜ್ಯದಲ್ಲಿ ಒಟ್ಟು ಎಷ್ಟು ಮಂದಿ ಈ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ ; ಒಟ್ಟು ವ್ಯವಹಾರ ಎಷ್ಟು (ವಿವರಣೆ ನೀಡುವುದು) ;

(ಋ) ಮೀನುಗಾರಿಕೆ ಅಭಿವೃದ್ಧಿ ನಿಗಮದಿಂದ ಈಗಾಗಲೇ ನಿರ್ಮಾಣಗೊಂಡಿರುವ ಸುಸಜ್ಜಿತ ಮೀನು ಮಾರುಕಟ್ಟೆಗಳು ಎಷ್ಟು; ಎಷ್ಟು ಮಾರುಕಟ್ಟೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ (ವಿವರಣೆ ನೀಡುವುದು) ?

## ಕರಾವಳಿ ಕರ್ನಾಟಕದಲ್ಲಿ ಕಂಬಳ ಜಾನಪದ ಕ್ರೀಡೆ.

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):–**

೧೯೬ (೩೬೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರಾವಳಿ ಕರ್ನಾಟಕದಲ್ಲಿ ಜಾನಪದ ಕ್ರೀಡೆಯಾದ ಕಂಬಳವನ್ನು ಎಷ್ಟು ವರ್ಷಗಳಿಂದ ನಡೆಸಲಾಗುತ್ತಿದೆ ; ರಾಜ್ಯ ಸರ್ಕಾರದಿಂದ ಈ ಕ್ರೀಡೆಗೆ ಕಳೆದ ೩ ವರ್ಷಗಳಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; ಪ್ರಸ್ತುತ ಈ ಕ್ರೀಡೆಯನ್ನು ಯಾವ ಯಾವ



ಜಿಲ್ಲೆಗಳಲ್ಲಿ ನಡೆಸಲಾಗುತ್ತಿದೆ ; (ವಿವರಣೆ ನೀಡುವುದು) ಈ ಕ್ರೀಡೆಗೆ ಆಯೋಜಕರು ಯಾರು ;

(ಆ) ರಾಜ್ಯದಿಂದ ಪ್ರತಿನಿಧಿಸಿ ರಾಷ್ಟ್ರಮಟ್ಟದಲ್ಲಿ ಚಿನ್ನ, ಬೆಳ್ಳಿ, ಕಂಚು ಗೆದ್ದಿರುವ ಕ್ರೀಡಾಳುಗಳಿಗೆ ನೀಡುತ್ತಿರುವ ಪ್ರೋತ್ಸಾಹಕ ಬಹುಮಾನ ಮೊತ್ತ ಎಷ್ಟು ; ಕಳೆದ ೩ ವರ್ಷಗಳಿಂದ ಯಾವ ಯಾವ ಕ್ರೀಡೆಯಿಂದ ಎಷ್ಟು ಜನರಿಗೆ ಬಹುಮಾನ ನೀಡಲಾಗಿದೆ (ವಿವರಣೆ ನೀಡುವುದು) ;

(ಇ) ಬಹುಮಾನದ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ ; ಇದ್ದರೆ, ಯಾವ ದಿನಾಂಕದಿಂದ ಜಾರಿಗೊಳಿಸಲಾಗುವುದು (ವಿವರಣೆ ನೀಡುವುದು) ;

(ಈ) ರಾಜ್ಯದಲ್ಲಿ ಎಷ್ಟು ಮಂದಿ ಕ್ರೀಡಾಳುಗಳಿಗೆ ಇಲಾಖೆಯಿಂದ ಪ್ರೋತ್ಸಾಹ ನೀಡಲಾಗುತ್ತಿದೆ ಮತ್ತು ಅವರ ಸಾಧನೆಯ ಪ್ರಗತಿಯನ್ನು ಗಮನಿಸಲಾಗುತ್ತಿದೆಯೇ ; ಎಷ್ಟು ಮಂದಿ ರಾಷ್ಟ್ರೀಯ–ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿರುತ್ತಾರೆ (ವಿವರಣೆ ನೀಡುವುದು) ;

(ಉ) ಮಂಗಳೂರಿನಲ್ಲಿ ಅಂತರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕ್ರೀಡಾ ಪ್ರಾಧಿಕಾರವನ್ನು ರಚಿಸುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ರೀಡಾ ಇಲಾಖೆಯಿಂದ ಪ್ರಸ್ತಾವನೆ ಹಂತದಲ್ಲಿರುವ ಯೋಜನೆಗಳು ಯಾವುವು ; ಯಾವ ಹಂತದಲ್ಲಿವೆ (ವಿವರಣೆ ನೀಡುವುದು) ?

## ಜಿಲ್ಲಾ ಕಛೇರಿಗಳ ಸಂಕೀರ್ಣ ನಿರ್ಮಾಣ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):–**

೧೯೭(೩೬೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಕಛೇರಿಗಳ ಸಂಕೀರ್ಣ (ಜಿಲ್ಲಾಧಿಕಾರಿಗಳ ಕಛೇರಿ ಸಹಿತ) ನಿರ್ಮಾಣ ಮಾಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ; ಇದ್ದರೆ, ಯಾವ ಹಂತದಲ್ಲಿದೆ ; ಬಿಡುಗಡೆಗೊಳಿಸಿದ ಅನುದಾನ ಎಷ್ಟು (ವಿವರ ನೀಡುವುದು) ;

(ಆ) ರಾಜ್ಯದಲ್ಲಿ ವಿಶೇಷ ಕಡತ ವಿಲೇವಾರಿ ಆಂದೋಲನ ಮೂಲಕ ಇಲಾಖೆಯಲ್ಲಿ ವಿಲೇವಾರಿ ಮಾಡಿದ ಒಟ್ಟು ಕಡತಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರಗಳನ್ನು ನೀಡುವುದು) ;

(ಇ) ಪ್ರಸ್ತುತ ಕಡತ ವಿಲೇವಾರಿಗೆ ಬಾಕಿ ಇರುವ ಕಡತಗಳು ಎಷ್ಟು ; ಕಡತ ವಿಲೇವಾರಿ ಆಂದೋಲನ ರಾಜ್ಯದಲ್ಲಿ ಮುಂದುವರಿಯುತ್ತಿದೆಯೇ ; ಇದ್ದಲ್ಲಿ, ಈ ಬಗ್ಗೆ ವಿವರಣೆ ನೀಡುವುದು ;

(ಈ) ಸಾಮಾಜಿಕ ಭದ್ರತೆ ಯೋಜನೆಯಡಿ ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಯೋಜನೆ, ನಿರ್ಗತಿಕ ವಿಧವಾ ವೇತನ, ಅಂಗವಿಕಲರ ವೇತನ, ಸಂಧ್ಯಾ ಸುರಕ್ಷಾ ಯೋಜನೆ, ಅಂತ್ಯ ಸಂಸ್ಕಾರ ಸಹಾಯ ಧನ ಯೋಜನೆ, ರಾಷ್ಟ್ರೀಯ ಕುಟುಂಬ ನೆರವು ಯೋಜನೆ, ಮೈತ್ರಿ ಯೋಜನೆ, ಮನಸ್ವಿನಿ ಯೋಜನೆಗಳಡಿ ರಾಜ್ಯದಲ್ಲಿನ ಎಲ್ಲಾ ಫಲಾನುಭವಿಗಳಿಗೆ ಮಂಜೂರಾತಿ ನೀಡಿದ ಮಾಹಿತಿ ಒದಗಿಸುವುದು ; ಎಷ್ಟು ದಿನದ ಒಳಗೆ ಈ ಯೋಜನೆ ಮಂಜೂರು ಮಾಡಲಾಗುತ್ತದೆ ;



(ಉ) ಈ ಯೋಜನೆಯನ್ನು ಎ.ಪಿ.ಎಲ್/ಬಿ.ಪಿ.ಎಲ್ ಕಾರ್ಡುದಾರರು ಅರ್ಜಿ ಸಲ್ಲಿಸಿದಲ್ಲಿ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ ; ಕಂದಾಯ ಅದಾಲತ್‌ಗಳನ್ನು ರಾಜ್ಯಾದ್ಯಂತ ಎಷ್ಟು ಜಿಲ್ಲೆಗಳಲ್ಲಿ ನಡೆಸಲಾಗಿದೆ ; (೧ ವರ್ಷದಿಂದ ಪ್ರತಿ ಗ್ರಾಮಗಳಲ್ಲಿ ಈ ಅದಾಲತ್ ನಡೆಸಲು ಕ್ರಮ ಕೈಗೊಳ್ಳಲಾಗಿದೆಯೇ (ವಿವರ ನೀಡುವುದು) ;

(ಊ) ಗ್ರಾಮೀಣ ಪ್ರದೇಶದ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ ೯ ಮತ್ತು ೧೧ನ್ನು (೧೧ ಎ ಮತ್ತು ೧೧ ಬಿ) ಪರಿಷ್ಕೃತ ಈ ಆದೇಶ ಕೈ ಬಿಡಲು ಜಿಲ್ಲಾಡಳಿತದಿಂದ ಮತ್ತು ಚುನಾಯಿತ ಪ್ರತಿನಿಧಿಗಳಿಂದ ಮನವಿ ನೀಡಲಾಗಿದೆಯೇ ; ಈ ಯೋಜನೆಯನ್ನು ಕೈ ಬಿಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ಈ ಕಾಯಿದೆಯಿಂದ ಆಸ್ತಿ ಮಾರಾಟಗಾರ ಮತ್ತು ಆಸ್ತಿ ನೋಂದಾವಣೆ ಮೇಲೆ ಪರಿಣಾಮ ಬೀರಿದೆ ಎಂಬುದು ಸರ್ಕಾರದ ಗಮನದಲ್ಲಿ ಇದೆಯೇ ;

(ಋ) ರಾಜ್ಯದಲ್ಲಿ ಒಟ್ಟು ಎಷ್ಟು ಭೂಮಾಪಕರನ್ನು ನೇಮಿಸಲಾಗಿದೆ ; ರಾಜ್ಯದಲ್ಲಿರುವ ಭೂಮಾಪಕರ ಬೇಡಿಕೆ ಎಷ್ಟು (ವಿವರಣೆ ನೀಡುವುದು) ?

## ಇ.ಎಸ್.ಐ. ಆಸ್ಪತ್ರೆಗಳು

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):–**

೧೯೮ (೩೬೩) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಾರ್ಮಿಕ ಇಲಾಖೆಯಿಂದ ನಡೆಸುವ ಇ.ಎಸ್.ಐ. ಆಸ್ಪತ್ರೆಗಳು ಎಷ್ಟು ; ರಾಜ್ಯದಲ್ಲಿರುವ ಒಟ್ಟು ಇ.ಎಸ್.ಐ. ಆಸ್ಪತ್ರೆಗಳು

ಎಷ್ಟು; ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಇ.ಎಸ್.ಐ. ಆಸ್ಪತ್ರೆಯಲ್ಲಿರುವ ವೈದ್ಯರುಗಳ ಹುದ್ದೆಗಳು ಎಷ್ಟು ; ಎಷ್ಟು ಹುದ್ದೆಗಳು ಖಾಲಿ ಇವೆ ; ದಿನವೊಂದಕ್ಕೆ ಸರಿಸಮಾನ ಎಷ್ಟು ಜನರು ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ (ವಿವರಣೆ ನೀಡುವುದು) ;

(ಆ) ವೈದ್ಯೇತರ ಸಿಬ್ಬಂದಿಗಳು ಎಷ್ಟು ಜನ ಕಾರ್ಯನಿರ್ವಹಿಸುತ್ತಿದ್ದಾರೆ ; ಖಾಲಿಯಿರುವ ಹುದ್ದೆಗಳು ಎಷ್ಟು ; ಮಂಗಳೂರಿನ ಇ.ಎಸ್.ಐ. ಆಸ್ಪತ್ರೆ ಒಟ್ಟು ಎಷ್ಟು ಹಾಸಿಗೆಗಳನ್ನು ಒಳಗೊಂಡಿದೆ ; ಈ ಆಸ್ಪತ್ರೆ ಸಹಿತ ರಾಜ್ಯದಲ್ಲಿರುವ ಎಲ್ಲಾ ಆಸ್ಪತ್ರೆಗಳನ್ನು ಇ.ಎಸ್.ಐ. ಕಾರ್ಪೋರೇಷನ್ ಆಫ್ ಇಂಡಿಯಾ ಇವರು ವಹಿಸಿಕೊಳ್ಳುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

(ಇ) ಕಾರ್ಮಿಕರ ಪಾಲನ್ನು (ಕಾಂಟ್ರಿಬ್ಯೂಷನ್) ರಾಜ್ಯ ಸರ್ಕಾರಕ್ಕೆ ಸಲ್ಲಿಸುತ್ತಾರೋ, ಕೇಂದ್ರ ಸರ್ಕಾರಕ್ಕೆ ಸಲ್ಲಿಸುತ್ತಾರೋ ; ರಾಜ್ಯದಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರು ಎಷ್ಟು (ಜಿಲ್ಲಾವಾರು ವಿವರಣೆ ನೀಡುವುದು) ;

(ಈ) ನೋಂದಾಯಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ನೀಡುವ ವ್ಯವಸ್ಥೆ ಜಾರಿಗೆ ಬಂದಿದೆಯೇ ; ಇಲ್ಲದಿದ್ದರೆ, ಪ್ರಸ್ತಾವ ಸರ್ಕಾರದ ಮುಂದಿದೆಯೇ ;

(ಉ) ಅಸಂಘಟಿತ ಕಾರ್ಮಿಕರಿಗಿರುವ ಪಿಂಚಣಿ ಯೋಜನೆಯನ್ನು ಎಷ್ಟು ಜನ ಫಲಾನುಭವಿಗಳಿಗೆ ನೋಂದಾಯಿಸಲಾಗಿದೆ ; ಎಷ್ಟು ಜನ ಫಲಾನುಭವಿಗಳಿಗೆ ಪ್ರಯೋಜನೆ ನೀಡಲಾಗಿದೆ (ವಿವರಣೆ ನೀಡುವುದು) ;



(ಊ) ಮಂಗಳೂರಿನಲ್ಲಿ ಇ.ಎಸ್.ಐ. ಆಸ್ಪತ್ರೆ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದರೆ, ಯಾವ ಹಂತದಲ್ಲಿದೆ ;

(ಋ) ರಾಜ್ಯದ ಕಾರ್ಮಿಕ ಇಲಾಖೆಯ ಆಸ್ಪತ್ರೆಗಳಿಗೆ ಯಾವ ಯಾವ ಜಿಲ್ಲೆಯಲ್ಲಿ ಸ್ವಂತ ಕಟ್ಟಡಗಳಿವೆ ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಂತ ಕಟ್ಟಡ ನಿರ್ಮಾಣದ ಪ್ರಸ್ತಾವನೆ ಇದೆಯೇ ?

## ಕೂಡಗಿ ವಿದ್ಯುತ್ ಸ್ಥಾವರಕ್ಕೆ ಒದಗಿಸಿರುವ ನೀರಿನ ಪ್ರಮಾಣ.

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ ):–**

೧೯೯ (೩೬೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಿಜಾಪೂರ ಜಿಲ್ಲೆಯ ಕೂಡಗಿ ಸೂಪರ್ ಥರ್ಮಲ್ ವಿದ್ಯುತ್ ಸ್ಥಾವರಕ್ಕೆ ಆಲಮಟ್ಟಿ ಜಲಾಶಯದಿಂದ ಎಷ್ಟು ಟಿ.ಎಂ.ಸಿ. ನೀರನ್ನು ಒದಗಿಸಲು ನಿರ್ಧರಿಸಲಾಗಿದೆ ;

(ಆ) ಇದರಿಂದ ಈಗಾಗಲೇ ಒದಗಿಸಿರುವ ನೀರಾವರಿ ಯೋಜನೆಗಳಿಗೆ ಕೊರತೆಯಾಗುವುದಿಲ್ಲವೇ ?

## ಬೆಳೆಹಾನಿ ಪರಿಹಾರ.

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ):–**

೨೦೦ (೩೭೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಿಜಾಪೂರ ಜಿಲ್ಲೆಯುಲ್ಲಿ ಆಲಿಕಲ್ಲು ಮಳೆಯಿಂದ ಬೆಳೆ ಹಾನಿಗೊಳಗಾದ ಎಷ್ಟು ರೈತರಿಗೆ ಪರಿಹಾರ ವಿತರಿಸಲಾಗಿದೆ ;

(ಆ) ಇದರಲ್ಲಿ ಬಾಕಿ ಉಳಿದವರೆಷ್ಟು ;

(ಇ) ಹಾನಿಗೊಳಗಾಗಿದ್ದರೂ ಪರಿಹಾರ ಸಿಗದೇ ಸಮಸ್ಯೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ನೇಕಾರರಿಗೆ ನೂಲು ಪೂರೈಸದಿರುವುದು.

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ):–**

೨೦೧ (೩೭೧) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ನೇಕಾರರಿಗೆ ನೂಲು ಪೂರೈಸದೇ ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಸಮಸ್ಯೆಯ ಪರಿಹಾರಕ್ಕೆ ಕ್ರಮವೇನು ;

(ಆ) ನಿಗಮದಿಂದ ನೇಕಾರರಿಗೆ ಮನೆ ಹಂಚಿಕೆ ಮಾಡಲಾಗುತ್ತಿದೆಯೇ ;

(ಇ) ಯಾವ ಅಳತೆಯ ಮನೆ ನೀಡಲಾಗುತ್ತಿದೆ ; ಈ ಯೋಜನೆಯ ವಿವರಗಳೇನು ?

## ರೈತರಿಗೆ ಸೌರಶಕ್ತಿ ಚಾಲಿತ ಕಾರ್ಯಕ್ರಮಗಳು.

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ):–**

೨೦೨ (೩೭೦) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರೈತರಿಗೆ ಸೌರಶಕ್ತಿ ಚಾಲಿತ ಪಂಪ್‌ಗಳನ್ನು ಅಳವಡಿಸಲು ಸೂರ್ಯ ಜ್ಯೋತಿ ರೈತರ ಬಾಳಿನ ಪರಂಜ್ಯೋತಿ ಕಾರ್ಯಕ್ರಮ ಜಾರಿಗೆ ಬಂದಿದೆಯೇ ;

(ಆ) ಈ ಯೋಜನೆಯಡಿ ಎಷ್ಟು ಕಡೆ ಸೌರಶಕ್ತಿ ಪಂಪ್‌ಸೆಟ್ ಅಳವಡಿಸಲಾಗಿದೆ (ಜಿಲ್ಲಾವಾರು ವಿವರ ನೀಡುವುದು) ?



## ಗುಡಿ ಕೈಗಾರಿಕೆಯಾಗಿ ನೇಕಾರಿಕೆ ಉದ್ಯಮ.

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ):–**

೨೦೩ (೩೭೪) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಬಡ ನೇಕಾರರಿಗೋಸ್ಕರ ಜವಳಿ ಇಲಾಖೆ ಯಾವಾಗ ಪ್ರಾರಂಭವಾಯಿತು ; ಅದರಡಿ ಇರುವಂತಹ ನಿಗಮಗಳು ಯಾವುವು ;

(ಆ) ಹಾಗಿದ್ದಲ್ಲಿ, ಅಂದಿನಿಂದ ಇದುವರೆವಿಗೂ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ನೇಕಾರಿಕೆ ನಡೆದು ಬಂದಿರುವುದು ಹಾಗೂ ಸರ್ಕಾರ ಪ್ರೋತ್ಸಾಹಿಸಿರುವುದು ನಿಜವೇ ;

(ಇ) ಕಳೆದ ೨–೩ ವರ್ಷಗಳಿಂದ ನಗರ ಭಾಗಗಳಲ್ಲಿ ನೇಕಾರರಿಗೆ ವಿನಾಕಾರಣ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದರೆ, ಸರ್ಕಾರದ ಯೋಜನೆಯಾದ ವಿದ್ಯುತ್ ಮಗ್ಗಗಳನ್ನು ಹಾಕಲು ನಗರಗಳಲ್ಲಿ ಅನುಮತಿ ಕೊಡದಿರಲು ಕಾರಣವೇನು ;

(ಉ) ಹಿಂದಿನಿಂದಲೂ ನೇಕಾರಿಕೆ ಉದ್ಯಮ ಗುಡಿ ಕೈಗಾರಿಕೆ ಎಂದು ಘೋಷಿಸಿಲ್ಲವೆ ?

## ಬಡ ನೇಕಾರರಿಗೆ ವಿದ್ಯುತ್ ಮಗ್ಗ ವಿತರಣೆ.

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ):–**

೨೦೪ (೩೭೫) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಬಡ ನೇಕಾರರಿಗೆ ಸಬ್ಸಿಡಿಯಲ್ಲಿ ವಿದ್ಯುತ್ ಮಗ್ಗ ನೀಡುವ ಯೋಜನೆ ಎಂದಿನಿಂದ ಜಾರಿಗೆ ಬಂದಿದೆ ;

(ಆ) ಪ್ರಾರಂಭದಿಂದ ಇದುವರೆಗೆ ಈ ಯೋಜನೆಗೆ ಯಾವ–ಯಾವ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ (ತಾಲ್ಲೂಕುವಾರು, ಗ್ರಾಮವಾರು ಪ್ರತಿಯೊಂದು ಆಯ್ಕೆಯಾಗಿರುವ ಫಲಾನುಭವಿ ಹೆಸರು, ವಿಳಾಸ ಸಮೇತ ಮಾಹಿತಿ ನೀಡುವುದು) ;

(ಇ) ಹಾಗಿದ್ದಲ್ಲಿ, ಹಾಲಿ ಚಾಲ್ತಿಯಲ್ಲಿರುವ ಮಗ್ಗಗಳೆಷ್ಟು, ಸ್ಥಗಿತಗೊಂಡಿರುವ ಮಗ್ಗಗಳೆಷ್ಟು ;

(ಈ) ಈ ಯೋಜನೆಯಡಿ ನೆರವು ಪಡೆದರೂ ನಗರ ವ್ಯಾಪ್ತಿಯಲ್ಲಿ ಅನುಮತಿ ಸಿಗದೆ ಇರುವ ಫಲಾನುಭವಿಗಳೆಷ್ಟು (ಪೂರ್ಣ ಮಾಹಿತಿ ನೀಡುವುದು) ?

## ರಾಮದುರ್ಗ ಕ್ಷೇತ್ರದಲ್ಲಿರುವ ನೇಕಾರರ ಸವಲತ್ತು.

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ):–**

೨೦೫ (೩೭೮) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯ ರಾಮದುರ್ಗ ಕ್ಷೇತ್ರದಲ್ಲಿ ಅತಿ ಹೆಚ್ಚು ಬಡಕೂಲಿ ನೇಕಾರರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಬಡ ನೇಕಾರರ ಕೋರಿಕೆ ಮೇರೆಗೆ ಇರುವರೆವಿಗೂ ಜವಳಿ ಇಲಾಖೆ ತೆಗೆದುಕೊಂಡಿರುವ ಕ್ರಮಗಳೇನು ;

(ಇ) ವಸತಿ ರಹಿತ, ಮಗ್ಗ ರಹಿತ, ನಿವೇಶನ ರಹಿತ ಬಡ ಕೂಲಿ ನೇಕಾರರು ಎಂದು ಇಲಾಖೆ ಗುರುತಿಸಿದೆಯೇ (ಪೂರ್ಣ ವಿಳಾಸ ಸಮೇತ ವಿವರ ನೀಡುವುದು) ;

(ಈ) ಜವಳಿ ಪಾರ್ಕ್ ನಿರ್ಮಿಸಲು ಸರ್ಕಾರ ನಿರ್ಧರಿಸಿದೆಯೇ ;



(ಉ) ಸರ್ಕಾರಿ ಜಾಗ ಗುರುತಿಸಿ ಬಡ ನೇಕಾರರಿಗೆ ನಿವೇಶನ ನೀಡಲು ಏನಾದರೂ ಕ್ರಮ ಜರುಗಿಸಲಾಗಿದೆಯೇ (ಈ ವರ್ಷದಲ್ಲಿ ತೆಗೆದುಕೊಳ್ಳುವ ಕಾರ್ಯಕ್ರಮದ ಬಗ್ಗೆ ವಿವರ ನೀಡುವುದು) ?

## ಕಾವೇರಿ ಹ್ಯಾಂಡ್‌ಲೂಮ್ಸ್‌ನ ಪುನಶ್ಚೇತನ.

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ):–**

೨೦೬ (೩೭೭) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾವೇರಿ ಹ್ಯಾಂಡ್‌ಲೂಮ್ಸ್ ಯಾವಾಗ ಪ್ರಾರಂಭವಾಯಿತು ; ಇದರ ಸ್ಥಿತಿಗತಿ ಏನು ;

(ಆ) ಹಾಗಿದ್ದರೆ, ಇದರ ಪುನಶ್ಚೇತನ ಕುರಿತು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ;

(ಇ) ಸರ್ಕಾರದ ವಿವಿಧ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಕಾವೇರಿ ಹ್ಯಾಂಡ್ ಲೂಮ್ಸ್‌ಗೆ ನೀಡಿರುವ ಸಾಲದ ರೂಪವು ಈಕ್ವಟಿಯಾಗಿ ಪರಿವರ್ತಿಸುವ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು ;

(ಈ) ಈ ಸಂಸ್ಥೆಯ ೨.೦೦ ಕೋಟಿ ಸುತ್ತು ನಿಧಿ (ರಿವಾಲ್ವಿಂಗ್ ಫಂಡ್) ಯನ್ನು ನೇಕಾರರ ವಿಶೇಷ ಪ್ಯಾಕೇಜ್ ಅಡಿಯಲ್ಲಿ ಬಿಡುಗಡೆ ಮಾಡಲು ತೆಗೆದುಕೊಂಡಿರುವ ಕ್ರಮವೇನು ;

(ಉ) ಸಂಸ್ಥೆಯ ವತಿಯಿಂದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ ತೆಗೆದುಕೊಂಡಿರುವ ಸಾಲದ ಬಡ್ಡಿ ಮನ್ನಾ ಮಾಡುವ ಯೋಚನೆ ಸರ್ಕಾರದ ಮುಂದಿದೆಯೇ ?

## ನೇಕಾರರ ಸ್ಥಿತಿಗತಿ.

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ):–**

೨೦೭ (೩೭೬) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ವಿಭಾಗದಲ್ಲಿರುವ ಯಾವ ಯಾವ ಜಿಲ್ಲೆಗಳಲ್ಲಿ ನೇಕಾರಿಕೆ ಉದ್ಯಮ ನಡೆಯುತ್ತಿದೆ ; (ಜಿಲ್ಲೆ, ತಾಲ್ಲೂಕುವಾರು, ಗ್ರಾಮವಾರು ವಿವರ ನೀಡುವುದು) ;

(ಆ) ಕೈಮಗ್ಗ ನೇಕಾರರು ಉದ್ಯಮ ನಡೆಸುತ್ತಿರುವ ಬಗ್ಗೆ ಹಾಗೂ ವಿದ್ಯುತ್ ಮಗ್ಗ ನೇಕಾರರ ಸ್ಥಿತಿಗತಿ ಬಗ್ಗೆ ಪೂರ್ಣ ಮಾಹಿತಿ ನೀಡುವುದು ;

(ಇ) ಸದರಿ ವಿಭಾಗದ ಜಿಲ್ಲೆಗಳ ನೇಕಾರರಿಗೆ ಕಳೆದ ಐದು ವರ್ಷಗಳಲ್ಲಿ ಸರ್ಕಾರ ಯಾವ ಯಾವ ಸವಲತ್ತು ನೀಡಿದೆ ;

(ಈ) ೨೦೧೪–೧೫ರಲ್ಲಿ ಈ ವಿಭಾಗದ ಬಡ ನೇಕಾರರಿಗೆ ನಿವೇಶನ ರಹಿತರಿಗೆ ನಿವೇಶನ ನೀಡಲು ಸರ್ಕಾರ ಆಯಾ ತಾಲ್ಲೂಕು ಹಾಗೂ ಜಿಲ್ಲೆಗಳಲ್ಲಿ ಸರ್ಕಾರಿ ಜಾಗ ಗುರುತಿಸಿದೆಯೇ ?

## "ಕೆರೆ ಅಭಿವೃದ್ಧಿ–ನಾಡಿನ ಶ್ರೇಯೋಭಿವೃದ್ಧಿ" ಯೋಜನೆ.

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೦೮ (೩೮೦) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯವು ಘೋಷಿಸಿರುವ "ಕೆರೆ ಅಭಿವೃದ್ಧಿ–ನಾಡಿನ ಶ್ರೇಯೋಭಿವೃದ್ಧಿ" ಯೋಜನೆಯನ್ನು ಎಂದಿನಿಂದ ಪ್ರಾರಂಭ ಮಾಡಲಾಗಿದೆ ;

(ಆ) ಈ ಯೋಜನೆಯಡಿ ಎಷ್ಟು ಕೆರೆಗಳನ್ನು ಅಭಿವೃದ್ಧಿ–ಗೊಳಿಸಲಾಗಿದೆ (ಜಿಲ್ಲಾವಾರು ವಿವರಗಳನ್ನು ನೀಡುವುದು) ;



(ಇ) ಇಲ್ಲಿಯವರೆವಿಗೆ ಈ ಯೋಜನೆಯಿಂದ ಎಷ್ಟು ರೈತರು ಅನುಕೂಲ ಪಡೆದುಕೊಂಡಿದ್ದಾರೆ (ವಿವರಗಳನ್ನು ನೀಡುವುದು) ;

(ಈ) ಇಲ್ಲಿಯವರೆವಿಗೆ ಈ ಯೋಜನೆಗೆ ನಿಗದಿಯಾದ ಹಾಗೂ ಖರ್ಚಾದ ಹಣವೆಷ್ಟು (ವಿವರಗಳನ್ನು ನೀಡುವುದು) ?

## ಸ್ಮಶಾನ ಜಮೀನಿನ ಸದ್ಬಳಕೆ.

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೦೯ (೩೭೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸ್ಮಶಾನ ಉದ್ದೇಶಕ್ಕೆ ಇಲ್ಲಿಯವರೆವಿಗೂ ಎಷ್ಟು ಜಮೀನನ್ನು ರಾಜ್ಯದಲ್ಲಿ ಖರೀದಿಸಲಾಗಿದೆ ; ಹೀಗೆ ಖರೀದಿಸಿದ ಜಮೀನು ಸದ್ಬಳಕೆ ಆಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಆ) ಬಹುಮುಖ್ಯವಾಗಿ ಮೈಸೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸ್ಮಶಾನದ ಜಾಗಕ್ಕೆ ಸಮಸ್ಯೆ ಇರುವುದರಿಂದ ಹೊಸದಾಗಿ ಸ್ಮಶಾನಕ್ಕಾಗಿ ಜಮೀನನ್ನು ಖರೀದಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಸರ್ಕಾರಿ ಭೂಮಿ ಒತ್ತುವರಿ.

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೦ (೩೮೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ಈ ತಿಳಿಸುವರೆ:–

(ಅ) ರಾಜ್ಯದಲ್ಲಿ ಸರ್ಕಾರಿ ಭೂಮಿ ಒತ್ತುವರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಇದುವರೆವಿಗೂ ಎಷ್ಟು ಸರ್ಕಾರಿ ಭೂಮಿ ಒತ್ತುವರಿಯಾಗಿದೆ ;

(ಇ) ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಂಡಿರುವವರು ಯಾರು ; ಅವರ ಸಂಪೂರ್ಣ ಮಾಹಿತಿ ನೀಡುವುದು ;

(ಈ) ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಸರ್ಕಾರ ಯಾವ ರೀತಿಯ ಕ್ರಮ ಜರುಗಿಸಿದೆ ;

(ಉ) ಒತ್ತುವರಿಯಿಂದ ಸ್ವಾಧೀನಪಡಿಸಿಕೊಂಡಂತಹ ಭೂಮಿಯನ್ನು ಸರ್ಕಾರ ಯಾವ ಉದ್ದೇಶಕ್ಕೆ ಬಳಸಿಕೊಳ್ಳಲು ಉದ್ದೇಶಿಸಿದೆ ?

## I.I.I.T. ಸಂಸ್ಥೆಗಾಗಿ ಜಮೀನು ಮಂಜೂರು.

**ಡಾ. ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೧ (೪೦೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ಈ ತಿಳಿಸುವರೆ:–

(ಅ) ಇನ್‌ಸ್ಟಿಟ್ಯೂಟ್ ಆಫ್ ಇನ್‌ಫಾರ್ಮೇಶನ್ ಟೆಕ್ನಾಲಜಿ (I.I.I.T.) ಯನ್ನು ಧಾರವಾಡದಲ್ಲಿ ಸ್ಥಾಪಿಸಲು ಕಾಲ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಸಂಸ್ಥೆಯನ್ನು ಸ್ಥಾಪಿಸಲು ಅಗತ್ಯವಾದ ಜಮೀನು ಲಭ್ಯವಿದ್ದು ಅದರ ಮಂಜೂರಾತಿ ಮಾಡುವಲ್ಲಿ ಸರ್ಕಾರವು "ವಿಶೇಷ ಆಸಕ್ತಿ" ತಳೆದು ಸೂಕ್ತ ಆದೇಶ ಹೊರಡಿಸುವುದೇ ?

## ಸರ್ಕಾರಿ ಭೂಮಾಪಕರ ಹುದ್ದೆಗಳು.

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೧೨ (೪೦೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ಈ ತಿಳಿಸುವರೆ:–

(ಅ) ಬಳ್ಳಾರಿ ಜಿಲ್ಲೆಯಲ್ಲಿರುವ ಸರ್ಕಾರಿ ಸರ್ವೆಯರ್ ಹುದ್ದೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;



(ಆ) ಇದರಲ್ಲಿ ಭರ್ತಿಯಿರುವ ಮತ್ತು ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಇ) ಈವರೆಗೆ ಭೂಮಿ ಸರ್ವೆ ಮಾಡಲು ಬಂದ ಅರ್ಜಿಗಳ ಸಂಖ್ಯೆ ಎಷ್ಟು ; ಅದರಲ್ಲಿ ಎಷ್ಟು ಅರ್ಜಿಗಳ ಕೆಲಸ ಮುಗಿದಿದೆ ; ಖಾಲಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಈ) ಅವಶ್ಯಕತೆಗೆ ಅನುಗುಣವಾಗಿ ಸರ್ವೆಯರ್ ಇಲ್ಲದ ಕಾರಣ ಭೂಮಿ ಸರ್ವೆ ಕಾರ್ಯ ವಿಳಂಬವಾಗುತ್ತಿದ್ದು ಇದರಿಂದ ಜನರಿಗೆ ತುಂಬಾ ತೊಂದರೆಯಾಗುತ್ತಿದ್ದು ಈ ತೊಂದರೆ ನೀಗಿಸಲು ಶೀಘ್ರವಾಗಿ ಸರ್ವೆಯರ್ ಹುದ್ದೆ ತುಂಬಲು ಸರ್ಕಾರ ಕ್ರಮಕೈಗೊಳ್ಳುವುದೇ ?

## ಕಂದಾಯ ಇಲಾಖೆಯಲ್ಲಿ ನೌಕರರ ಕೊರತೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೩ (೪೦೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿ ಕಂದಾಯ ಇಲಾಖೆ ನೌಕರರ ಹುದ್ದೆಗಳು ಸಾಕಷ್ಟು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ನೌಕರರ ಸಂಖ್ಯೆ ಕಡಿಮೆ ಇರುವುದರಿಂದ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಹೆಚ್ಚಿನ ಹೊರೆ ಉಂಟಾಗಿರುವುದು ನಿಜವೇ ;

(ಇ) ಕಾರ್ಯಭಾರದ ಒತ್ತಡದಿಂದ ಹೆಚ್ಚಿನ ಹೊರೆ ನಿರ್ವಹಿಸಲಾಗದ್ದರಿಂದ ನೌಕರರು ಸಮರ್ಪಕವಾಗಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅವಶ್ಯಕತೆಯಿರುವ ಸಿಬ್ಬಂದಿಯನ್ನು ಶೀಘ್ರ ಭರ್ತಿ ಮಾಡಲಾಗುವುದೇ ?

## ಒತ್ತುವರಿ ತೆರವು

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೪ (೪೦೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಹಾಗೂ ಬೆಂಗಳೂರು ಸುತ್ತಮುತ್ತ ಆಗಿರುವ ಒತ್ತುವರಿಯನ್ನು ಮಾನ್ಯ ಉಚ್ಚ ನ್ಯಾಯಾಲಯ ತೆರವುಗೊಳಿಸುವಂತೆ ಸರ್ಕಾರಕ್ಕೆ ಸೂಚಿಸಿದ್ದ ಹಿನ್ನೆಲೆಯಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು ;

(ಆ) ಎಷ್ಟು ಭೂಮಿಯನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ; ನ್ಯಾಯಾಲಯದ ಆದೇಶದಂತೆ ಒತ್ತುವರಿಯನ್ನು ತೆರವುಗೊಳಿಸಲಾಗಿದೆಯೇ; ಎಷ್ಟು ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ ;

(ಇ) ಒತ್ತುವರಿ ತೆರವುಗೊಳಿಸಲು ಏನಾದರೂ ಅಡೆತಡೆಗಳಿವೆಯೇ ;

(ಈ) ಒತ್ತುವರಿ ತೆರವುಗೊಳಿಸಲು ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆಯೇ, ಸಂಪೂರ್ಣವಾಗಿ ಒತ್ತುವರಿಯನ್ನು ಸರ್ಕಾರ ಯಾವಾಗ ಸ್ವಾಧೀನಕ್ಕೆ ಪಡೆಯಲಿದೆ ?

## ಚಲಘಟ್ಟ ಕೆರೆಯ ಜಮೀನಿನ ಅಭಿವೃದ್ಧಿ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೫ (೪೦೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಜಿಲ್ಲೆ ಪೂರ್ವ ತಾಲ್ಲೂಕಿನಲ್ಲಿರುವ ಚಲಘಟ್ಟ ಕೆರೆಯ ಜಮೀನನ್ನು ಪ್ರವಾಸೋದ್ಯಮಕ್ಕಾಗಿ ಅಭಿವೃದ್ಧಿ ಪಡಿಸಲು



ಎಷ್ಟು ಎಕರೆ ಜಮೀನನ್ನು ಯಾವ ಖಾಸಗಿ ಕಂಪನಿಗೆ ನೀಡಲಾಗಿದೆ ;

(ಆ) ಟ್ಯಾಂಕ್‌ಬೆಡ್ ಏರಿಯಾ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ನೀಡಲಾಗಿತ್ತೆ; ಯಾವ ಒಪ್ಪಂದದ ಆಧಾರದ ಮೇಲೆ ನೀಡಲಾಗಿದೆ; ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಲಾಗಿದೆಯೇ ?

## ಬೆಂಗಳೂರು ಮಹಾನಗರದಲ್ಲಿ ಸಬ್ ರಿಜಿಸ್ಟ್ರಾರ್ ಕಛೇರಿಗಳು

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೬ (೪೧೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಎಷ್ಟು ಸಬ್ ರಿಜಿಸ್ಟ್ರಾರ್ ಕಛೇರಿಗಳಿವೆ (ಅವುಗಳ ವಿಳಾಸವನ್ನು ನೀಡುವುದು) ;

(ಆ) ೨೦೧೨ರಿಂದ ಇಲ್ಲಿಯವರೆಗೆ ಸಬ್ ರಿಜಿಸ್ಟ್ರಾರ್ ಕಛೇರಿಗಳಿಂದ ಸಂಗ್ರಹವಾದ ರೆವಿನ್ಯೂ (Stamp found )ಹಣವೆಷ್ಟು (ಕಛೇರಿವಾರು ಹಾಗೂ ವರ್ಷವಾರು ಮಾಹಿತಿ ನೀಡುವುದು) ?

## ಕಾಡು ಪ್ರಾಣಿಗಳಿಂದ ರೈತನ ಬೆಳೆ ಹಾನಿ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೭ (೪೧೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾಡು ಪ್ರಾಣಿಗಳಾದ ಆನೆ, ಹಂದಿ ಹಾಗೂ ಇನ್ನಿತರ ಪ್ರಾಣಿಗಳು ಗ್ರಾಮ ಅಥವಾ ರೈತನ ಬೆಳೆಯ ಮೇಲೆ ದಾಳಿ ತಡೆಯಲು ಕಾಡಿನ ಸುತ್ತ ರೈಲ್ವೆ ಕಂಬಿಗಳನ್ನು ಅಳವಡಿಸಲಾಗುತ್ತದೆ ಎಂದು ಸರ್ಕಾರ ನೀಡಿದ ಭರವಸೆ ಏನಾಯಿತು ;

(ಆ) ಪ್ರಾಯೋಗಿಕವಾಗಿ ಯಾವ ಕಾಡಿನಲ್ಲಿ ಅಳವಡಿಸಲಾಗಿದೆ; ಅದರ ಪರಿಣಾಮ ಏನು ?

## ಮೇಕೆದಾಟು ಅಣೆಕಟ್ಟು ನಿರ್ಮಾಣ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೮ (೪೦೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೇಕೆದಾಟು ಅಣೆಕಟ್ಟು ನಿರ್ಮಾಣ ಯಾವ ಹಂತದಲ್ಲಿದೆ (ವಿವರದೊಂದಿಗೆ) ;

(ಆ) ರಾಜ್ಯದ ಗಡಿ ಭಾಗದಲ್ಲಿ ತಮಿಳುನಾಡಿನವರು ರೆಸಾರ್ಟ್ ನಿರ್ಮಾಣ, ಪ್ರವಾಸೋದ್ಯಮ ತಾಣಗಳನ್ನಾಗಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ಬಗ್ಗೆ ಸರ್ಕಾರದ ನಿಲುವೇನು ?

## ಮೇಕೆದಾಟು ಬಳಿ ಅಣೆಕಟ್ಟು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೨೧೯ (೪೧೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪಿನ ಪ್ರಕಾರ ತಮಿಳುನಾಡು ರಾಜ್ಯಕ್ಕೆ ಹರಿಸುವ ನೀರಿನ ಪ್ರಮಾಣ ಎಷ್ಟು ;

(ಆ) ಪ್ರತಿ ವರ್ಷ ಎಷ್ಟು ಪ್ರಮಾಣದ ನೀರು ಕಾವೇರಿ ನದಿ ಮೂಲಕ ಹರಿದು ಹೋಗುತ್ತಿದೆ (ಕಳೆದ ೧೦ ವರ್ಷಗಳ ಅಂಕಿ–ಅಂಶಗಳನ್ನು ನೀಡುವುದು) ;

(ಇ) ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಬಳಿ ಅಣೆಕಟ್ಟು ಕಟ್ಟಲು ಸರ್ಕಾರ ಯೋಜಿಸುತ್ತಿದೆಯೇ ;



(ಈ) ಹಾಗಿದ್ದಲ್ಲಿ, ಸದರಿ ಅಣೆಕಟ್ಟಿನ ರೂಪುರೇಷೆಗಳೇನು ?

## ಕೆರೆಗಳ ಒತ್ತುವರಿ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೨೨೦ (೪೧೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ನಿಯಮಗಳ ಪ್ರಕಾರ ಕೆರೆಗಳ ಒತ್ತುವರಿ ಎಂದರೇನು ;

(ಆ) ಕೋಲಾರ–ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಒತ್ತುವರಿಯಾಗಿರುವ ಕೆರೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಇ) ಇಲ್ಲಿಯುವರೆಗೂ ಎಷ್ಟು ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲಾಗಿದೆ ;

(ಈ) ಇನ್ನೂ ಎಷ್ಟು ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಬೇಕಾಗಿದೆ ;

(ಉ) ಕೆರೆಗಳ ಒತ್ತುವರಿಯನ್ನು ಆದಷ್ಟು ಬೇಗನೆ ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಅನುದಾನ ರಹಿತ ಉದ್ಯೋಗ ತರಬೇತಿ ಕೇಂದ್ರಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೨೨೧ (೪೧೩) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸರ್ಕಾರಿ ಅನುದಾನ ಮತ್ತು ಅನುದಾನ ರಹಿತ ಉದ್ಯೋಗ ತರಬೇತಿ ಕೇಂದ್ರಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಅನುದಾನಕ್ಕೆ ಒಳಪಡಲು ಅರ್ಹತೆ ಹೊಂದಿ ಇನ್ನೂ ಅನುದಾನಕ್ಕೆ ಒಳಪಡದೇ ಇರುವ ಖಾಸಗಿ ಉದ್ಯೋಗ ತರಬೇತಿ ಕೇಂದ್ರಗಳೆಷ್ಟು; ಇದಕ್ಕೆ ಕಾರಣಗಳೇನು (ವಿವರ ನೀಡುವುದು) ?

## ಸರ್ಕಾರಿ ಉದ್ಯೋಗ ತರಬೇತಿ ಕೇಂದ್ರಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೨೨೨ (೪೧೬) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸರ್ಕಾರಿ ಐ.ಟಿ.ಐ ಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಈ ಕೊರತೆಗಳನ್ನು ನೀಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ನೀರಾವರಿ ಸಂಪನ್ಮೂಲಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೨೨೩ (೪೧೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ನೀರಾವರಿ ಸಂಪನ್ಮೂಲಗಳನ್ನು ಅಂದಾಜಿಸಲಾಗಿದೆಯೇ ;

(ಆ) ಇದ್ದಲ್ಲಿ, ಈ ಸಂಪನ್ಮೂಲಗಳ ಪ್ರಮಾಣ ಎಷ್ಟು (ವಿವರವಾದ ಮಾಹಿತಿಯನ್ನು ಅಣೆಕಟ್ಟುವಾರು ನೀಡುವುದು) ;



(ಇ) ಮೇಲ್ಕಂಡ ಸಂಪನ್ಮೂಲಗಳ ಪ್ರಮಾಣದಲ್ಲಿ ಎಷ್ಟು ಪ್ರಮಾಣದ ಶೇಕಡಾವಾರು ನೀರಿನ ಸಂಪನ್ಮೂಲವನ್ನು ಸರ್ಕಾರ ಸದ್ಬಳಕೆ ಮಾಡಿಕೊಳ್ಳುತ್ತಿದೆ ;

(ಈ) ಬಳಕೆ ಮಾಡಿಕೊಳ್ಳದ ನೀರಿನ ಪ್ರಮಾಣ ಎಷ್ಟು ;

(ಉ) ಈ ನೀರನ್ನು ಬಳಕೆ ಮಾಡಿಕೊಳ್ಳಲು ಇರುವ ಅಡಚಣೆಗಳೇನು (ವಿವರ ನೀಡುವುದು) ?

## " ಸಂಧ್ಯಾ ಸುರಕ್ಷಾ ಯೋಜನೆ "

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೨೪ (೪೧೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲೆಯ ಸಂಧ್ಯಾ ಸುರಕ್ಷಾ ಯೋಜನೆ ಅಡಿಯಲ್ಲಿ ಮಾಸಿಕ ನಿವೃತ್ತಿ ವೇತನ ಪಡೆಯುತ್ತಿರುವವರ ಸಂಖ್ಯೆ ಎಷ್ಟು (ವಿವರ ಒದಗಿಸುವುದು) ;

(ಆ) ಇವರಲ್ಲಿ ಎಷ್ಟು ಜನರಿಗೆ ಸಂಧ್ಯಾ ಸುರಕ್ಷಾ ಯೋಜನೆಯ ಮಾಸಿಕ ನಿವೃತ್ತಿ ವೇತನ ವಿತರಣೆಯನ್ನು ನಿಲ್ಲಿಸಲಾಗಿದೆ; ಇದಕ್ಕೆ ಕಾರಣಗಳೇನು ;

(ಇ) ಈ ಜಿಲ್ಲೆಯ ಜನ ಕಡುಬಡವರಿದ್ದು, ಈ ವೇತನ ಅವಲಂಬಿಸಿ ತಮ್ಮ ಜೀವನ ನಡೆಸುತ್ತಿದ್ದು, ಇದ್ದಕ್ಕಿದ್ದ ಹಾಗೇ ನಿವೃತ್ತಿ ವೇತನ ನಿಲ್ಲಿಸಲು ಕಾರಣಗಳೇನು ?

## ಅರಣ್ಯ ಅಭಿವೃದ್ಧಿ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೨೫ (೪೧೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ೨೦೧೨–೨೦೧೪ ನೇ ಸಾಲುಗಳಲ್ಲಿ ಅರಣ್ಯ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳಿಗೆ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಬಿಡುಗಡೆ ಮಾಡಿದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅನುದಾನ ಎಷ್ಟು (ಯೋಜನೆಗಳವಾರು, ವರ್ಷವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ಹಾಗಿದ್ದಲ್ಲಿ, ಕಳೆದ ೩ ವರ್ಷಗಳಲ್ಲಿ ನೆಡುತೋಪು (ಪ್ಲಾಂಟೇಶನ್) ಯೋಜನೆಯನ್ನು ಎಷ್ಟು ಹೆಕ್ಟೇರಿನಲ್ಲಿ ಯಾವ ಗ್ರಾಮದ ಸರ್ವೆ ನಂಬರ್‌ನಲ್ಲಿ ಕೈಗೊಳ್ಳಲಾಗಿದೆ; ಮಾಡಿದ್ದಲ್ಲಿ ಇದಕ್ಕೆ ತಗುಲಿದ ಖರ್ಚು ವೆಚ್ಚ ಎಷ್ಟು ;

(ಇ) ಈ ಯೋಜನೆಯಡಿ ಕೂಲಿ ಕಾರ್ಮಿಕರಿಗೆ ನೀಡಿದ ಹಣ ಎಷ್ಟು (ಅಂಕಿ–ಅಂಶಗಳೊಂದಿಗೆ ಯೋಜನೆಗಳವಾರು ವರ್ಷವಾರು ಮಾಹಿತಿ ನೀಡುವುದು) ?

## ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಬಾಲ ಕಾರ್ಮಿಕ ಪದ್ಧತಿ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೨೬ (೪೧೯) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದರಾಬಾದ್ ಕರ್ನಾಟಕ ಭಾಗದ ೬ ಜಿಲ್ಲೆಗಳಲ್ಲಿ ಬಾಲ ಕಾರ್ಮಿಕರನ್ನು ಗುರುತಿಸಲು ಇಲಾಖೆಯು ಕೈಗೊಂಡ ಕ್ರಮಗಳೇನು ;



(ಆ) ಇದುವರೆಗೂ ಗುರುತಿಸಿರುವ ಬಾಲ ಕಾರ್ಮಿಕರ ಒಟ್ಟು ಸಂಖ್ಯೆ ಎಷ್ಟು ;

(ಇ) ಬಾಲ ಕಾರ್ಮಿಕರ ಪದ್ಧತಿಯನ್ನು ನಿರ್ಮೂಲನ ಮಾಡುವಲ್ಲಿ ಇಲಾಖಾಧಿಕಾರಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆಯೇ; ಇಲ್ಲದಿದ್ದಲ್ಲಿ, ಇಂತಹವರ ಮೇಲೆ ಕೈಗೊಂಡ ಕ್ರಮಗಳೇನು ;

(ಈ) ಬಾಲ ಕಾರ್ಮಿಕರಿಗೆ ನ್ಯಾಯ ದೊರಕಿಸಿ ಶಿಕ್ಷಣ ನೀಡಲು ಯಾವ ಕ್ರಮ ಕೈಗೊಳ್ಳಲಾಗಿದೆ ;

(ಉ) ಇದುವರೆವಿಗೂ ಶಿಕ್ಷಣ ನೀಡಿರುವ ಬಾಲ ಕಾರ್ಮಿಕರ ಒಟ್ಟು ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ?

## ನೀರಾವರಿ ಯೋಜನೆಗಳು

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೨೭ (೪೨೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ವಿವಿಧ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರತಿ ವರ್ಷ ವೆಚ್ಚ ಮಾಡಿರುವ ಹಣವೆಷ್ಟು ; ಈ ಹಣದಿಂದ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ (ಯೋಜನಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ಈ ಪೈಕಿ ಎಷ್ಟು ಯೋಜನೆಗಳು ಪೂರ್ಣಗೊಂಡಿವೆ ಮತ್ತು ಇನ್ನೂ ಎಷ್ಟು ಯೋಜನೆಗಳು ಅಪೂರ್ಣವಾಗಿವೆ; ಯೋಜನೆಗಳನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ನೂತನ ಪಕ್ಷಿಧಾಮ ಸ್ಥಾಪನೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೨೮ (೪೨೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಸಮೀಪ ಭೂತರಾಮನಹಟ್ಟಿ ಪ್ರಾಣಿ ಸಂಗ್ರಹಾಲಯದಲ್ಲಿ ಅರಣ್ಯ ಇಲಾಖೆಯವರು ಪಕ್ಷಿಧಾಮ ಕೇಂದ್ರ ಸ್ಥಾಪಿಸಲು ಮುಂದಾಗಿರುವ ಸಂಗತಿ ನಿಜವೇ ;

(ಆ) ಕಣ್ಣಿಗೆ ಅಪರೂಪವಾಗಿ ಕಾಣುವ ಯಾವ–ಯಾವ ಪಕ್ಷಿಗಳನ್ನು ಇಲ್ಲಿ ಸಂಗ್ರಹಿಸಲಾಗುವುದು; ಇದರ ರೂಪ–ರೇಷೆ ವಿವರಗಳನ್ನು ಒದಗಿಸುವುದು ;

(ಇ) ಈ ಪಕ್ಷಿಗಳನ್ನೂ ಸಹ ದತ್ತು ತೆಗೆದುಕೊಳ್ಳಲು ಅವಕಾಶ ಮಾಡಿಕೊಡಲಾಗುವುದೇ (ವಿವರ ನೀಡುವುದು)?

## ಘೋಷಿತ ಕಿತ್ತೂರನ್ನು ಪೂರ್ಣ ತಾಲ್ಲೂಕನ್ನಾಗಿ ಮಾಡುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೨೯ (೪೨೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆ ಕಿತ್ತೂರನ್ನು ಪೂರ್ಣ ಪ್ರಮಾಣದ ತಾಲ್ಲೂಕು ಮಾಡುವುದಾಗಿ ಹಿಂದಿನ ಮುಖ್ಯಮಂತ್ರಿಗಳು ಘೋಷಣೆ ಮಾಡಿದ ಸಂಗತಿ ನಿಜವೇ ;

(ಆ) ಕಿತ್ತೂರಲ್ಲಿ ಪೂರ್ಣ ಪ್ರಮಾಣದ ತಾಲ್ಲೂಕಿನ ಎಲ್ಲ ಕಛೇರಿಗಳು ಇಲ್ಲಿಯವರೆಗೂ ಕೆಲಸ ಮಾಡದೇ ಇರುವ ಸಂಗತಿ ನಿಜವೇ ;

(ಇ) ಕೇವಲ ವಿಶೇಷ ತಹಶೀಲದಾರರನ್ನು ನೇಮಿಸಿ ಅಲ್ಲಿ ಕಂದಾಯ ಇಲಾಖೆಯ ಕೆಲಸಗಳನ್ನು ನಡೆಸುತ್ತಿರುವ ಸಂಗತಿ ನಿಜವೇ ;



(ಈ) ಹಾಗಿದ್ದಲ್ಲಿ, ಹಿಂದಿನ ಮುಖ್ಯಮಂತ್ರಿಗಳು ಘೋಷಣೆ ಮಾಡಿದ ಪ್ರಕಾರ ಸಾರ್ವಜನಿಕರಿಗೆ ಅನುಕೂಲವಾಗಲು ಕಿತ್ತೂರನ್ನು ಪೂರ್ಣ ಪ್ರಮಾಣದ ತಾಲ್ಲೂಕು ಕೇಂದ್ರವನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

## ಜಿಂಕೆ ವನದ ಅಭಿವೃದ್ಧಿ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೩೦ (೪೨೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕಿನ ಸೊಗಲದಲ್ಲಿರುವ ಜಿಂಕೆ ವನವನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ ;

(ಆ) ಈ ಜಿಂಕೆ ವನವನ್ನು ಅಭಿವೃದ್ಧಿಪಡಿಸಲು ಒಟ್ಟು ಎಷ್ಟು ಹಣಕಾಸಿನ ನೆರವು ಬೇಕಾಗುವುದು ;

(ಇ) ಈ ಸಂಬಂಧ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ ?

## ಇಂಗು ಕೆರೆಗಳ ನಿರ್ಮಾಣ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೩೧ (೪೨೫) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆ, ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ ಅಂತರ್‌ಜಲ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ತಾಲ್ಲೂಕುಗಳಲ್ಲಿ ಅಂತರ್‌ಜಲವನ್ನು ಹೆಚ್ಚಿಸುವ ಸಲುವಾಗಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳ ಯಾವ ಯಾವ ಗ್ರಾಮಗಳಲ್ಲಿ ಇಂಗು ಕೆರೆ ನಿರ್ಮಾಣ ಮಾಡಬೇಕೆಂದು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ; ಹಾಗಾದರೆ, ಇದಕ್ಕೆ ಬೇಕಾಗುವ ಮೊತ್ತವೆಷ್ಟು ;

(ಈ) ಸದರಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

## ಸಣ್ಣ ಜವಳಿ ಪಾರ್ಕ್ ನಿರ್ಮಾಣ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೩೨ (೪೨೨) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯಾದಗಿರಿ ಜಿಲ್ಲೆಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಜವಳಿ ಪಾರ್ಕ್ ಬರಲಿದೆ ಎಂಬ ಸಂಗತಿ ನಿಜವೇ ;

(ಆ) ಈಗ ಇಲ್ಲಿ ಸ್ಥಾಪಿಸಬೇಕೆಂದಿರುವ ಪಾರ್ಕ್ ಯಾವ ಹಂತದಲ್ಲಿದೆ; ಇದಕ್ಕೆ ಎಷ್ಟು ವೆಚ್ಚವಾಗುವುದು ಹಾಗೂ ಎಷ್ಟು ಜನರಿಗೆ ಉದ್ಯೋಗಾವಕಾಶ ಸಿಗುವುದು ;

(ಇ) ಬೆಳಗಾವಿ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳಲ್ಲಿ ಸಣ್ಣ ಜವಳಿ ಪಾರ್ಕ್ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದೇ; ಇದಕ್ಕೆ ಸ್ಥಳ ಗುರುತಿಸಲಾಗಿದೆಯೇ ;

(ಈ) ಇಲ್ಲಿ ಪ್ರಾರಂಭಿಸುವುದರಿಂದ ಎಷ್ಟು ಜನರಿಗೆ ಉದ್ಯೋಗಾವಕಾಶಗಳು ಒದಗುವುದು ;



(ಉ) ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ವಕ್ಕುಂದ, ದೇಶನೂರು, ಕಿತ್ತೂರು ಗ್ರಾಮಗಳಲ್ಲಿ ಎಲ್ಲ ಮೂಲಭೂತ ಸೌಕರ್ಯಗಳಿದ್ದು ಜವಳಿ ಕೈಮಗ್ಗ ಪಾರ್ಕ್ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಊ) ಈ ಗ್ರಾಮಗಳ ಎಷ್ಟು ಜನ ನೇಕಾರರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ಸಹಾಯ ಮಾಡಲಾಗುತ್ತಿದೆ; ಹಾಗೂ ಇವರಿಗೆ ಶೇ.೪ರ ಬಡ್ಡಿ ದರದಲ್ಲಿ ರಾಷ್ಟ್ರೀಕೃತ ಬ್ಯಾಂಕಿನವರು ಸಾಲ ನೀಡುತ್ತಿಲ್ಲ. ಇಂತಹ ಬ್ಯಾಂಕುಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಋ) ಕೇಂದ್ರ ಸರ್ಕಾರ ಸಾಕಷ್ಟು ಜವಳಿ ಉದ್ದಿಮೆಗೆ ಪ್ರೋತ್ಸಾಹ ಕೊಡಲು ಸಿದ್ಧವಿದ್ದರೂ, ರಾಜ್ಯ ಸರ್ಕಾರ ಅದರ ಸದುಪಯೋಗ ಪಡೆಯಲು ಆಗುತ್ತಿಲ್ಲವೆಂಬ ಸಂಗತಿ ನಿಜವೇ ?

## ನೇಕಾರರ ಕಾಲೋನಿಗಳ ನಿರ್ಮಾಣ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೩ (೪೨೭) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ನೇಕಾರರ ಹೊಸ ಕಾಲೋನಿಗಳನ್ನು ನಿರ್ಮಿಸಲಾಗುತ್ತಿದೆ; ಅವು ಯಾವ ಯಾವ ಹಂತದಲ್ಲಿವೆ ; ಈಗಾಗಲೇ ಇದ್ದ ನೇಕಾರರ ಕಾಲೋನಿಗಳಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ ?

## ಮುಚ್ಚದಿರುವ ಕೊಳವೆ ಬಾವಿಗಳು

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :–**

೨೩೪ (೪೨೮) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕರ್ನಾಟಕ ಮತ್ತು ಹೈದರಾಬಾದ್–ಕರ್ನಾಟಕ ಜಿಲ್ಲೆಗಳಲ್ಲಿರುವ ಅಧಿಕೃತ ಮತ್ತು ಅನಧಿಕೃತ ಕೊಳವೆ ಬಾವಿಗಳು ಎಷ್ಟು ಅಥವಾ ನೋಂದಣಿಯಾಗಿರುವ ಮತ್ತು ನೋಂದಣಿ ಮಾಡದಿರುವ ಕೊಳವೆ ಬಾವಿಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಆ) ಕೊಳವೆ ಬಾವಿಗಳ ನೋಂದಣಿಯ ಪ್ರಗತಿಯ ವಿವರಗಳನ್ನು ನೀಡುವುದು ;

(ಇ) ಈ ಜಿಲ್ಲೆಗಳಲ್ಲಿ ಮುಚ್ಚಲು ವಿಫಲವಾಗಿರುವ ಕೊಳವೆ ಬಾವಿಗಳೆಷ್ಟು; ಮಕ್ಕಳ ರಕ್ಷಣೆಗಾಗಿ ಇಂತಹ ವಿಫಲತೆಯ ಕೊಳವೆ ಬಾವಿಗಳ ಸಂಬಂಧ ಸರ್ಕಾರ ಏನು ಕ್ರಮ ಜರುಗಿಸಿದೆ ?

## ದಿ ವೆಸ್ಟ್‌ಕೋಸ್ಟ್ ಕಾಗದ ಕಾರ್ಖಾನೆಯ ಕಾರ್ಮಿಕರು

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೫ (೪೩೩) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ನಗರದಲ್ಲಿರುವ ದಿ ವೆಸ್ಟ್‌ಕೋಸ್ಟ್ ಕಾಗದ ಕಾರ್ಖಾನೆಯಲ್ಲಿ ದಿನಾಂಕ: ೦೯–೧೧–೨೦೧೪ರಂದು ಕಾರ್ಮಿಕರ ಚುನಾವಣೆ ನಡೆದಿರುತ್ತದೆಯೇ ;

(ಆ) ಸದರಿ ಕಾರ್ಖಾನೆಯ ಎಷ್ಟು ಕಾರ್ಮಿಕರು ಮತದಾರರಾಗಿ ಸದರಿ ಜೆ.ಎನ್.ಸಿ ಚುನಾವಣೆಯಲ್ಲಿ ಭಾಗವಹಿಸಿರುತ್ತಾರೆ ;



(ಇ) ಯಾವ ಯಾವ ಸಂಘಟನೆಗಳು ಕಾರ್ಮಿಕ ಇಲಾಖೆಯ ಬೆಂಗಳೂರು ಹಾಗೂ ಹುಬ್ಬಳ್ಳಿಯ ಅಧಿಕಾರಿಗಳಿಗೆ ದೂರು ಸಲ್ಲಿಸಿರುತ್ತಾರೆ; ದೂರಿನಲ್ಲಿರುವ ಪ್ರಮುಖ ಅಂಶಗಳೇನು; ಈ ದೂರುಗಳಿಗೆ ಇಲಾಖೆಯಿಂದ ಯಾವ ಪರಿಹಾರ ಕೈಗೊಳ್ಳಲಾಗಿದೆ (ವಿವರಣೆ ನೀಡುವುದು) ;

(ಈ) ೧೯೯೧ರಲ್ಲಿ ಕಾರ್ಮಿಕ ಇಲಾಖೆ, ಕಾರ್ಮಿಕ ಸಂಘಟನೆಗಳು ಹಾಗೂ ಸದರಿ ಕಾಗದ ಕಾರ್ಖಾನೆ ಮಾಡಿಕೊಂಡ ಚುನಾವಣಾ ಒಪ್ಪಂದದ ಪ್ರತಿಗಳನ್ನು ನೀಡುವುದು ?

## ಯರಗೋಳು ಕುಡಿಯುವ ನೀರಿನ ಯೋಜನೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೬ (೪೩೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ಜಿಲ್ಲೆ, ಯರಗೋಳು ಕುಡಿಯುವ ನೀರಿನ ಯೋಜನೆ ಯಾವ ಹಂತದಲ್ಲಿದೆ;

(ಆ) ಪೈಪ್ ಲೈನ್ ಅಳವಡಿಸಿ ಎಂಟು ವರ್ಷಗಳು ಕಳೆದರೂ ಸಹ ಯರಗೋಳು ಯೋಜನೆ ಜಾರಿಯಾಗದಿರಲು ಕಾರಣವೇನು; ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಸುವರ್ಣ ಭೂಮಿ ಯೋಜನೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೭ (೪೩೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸುವರ್ಣ ಭೂಮಿ ಯೋಜನೆ ಜಾರಿಯಲ್ಲಿದೆಯೇ;

(ಆ) ಇದ್ದಲ್ಲಿ, ಎಷ್ಟು ಮಂದಿ ರೈತರಿಗೆ ಈ ಯೋಜನೆಯಿಂದ ಎಷ್ಟೆಷ್ಟು ಹಣ ನೀಡಲಾಗಿದೆ?

## ಎ.ಟಿ. ರಾಮಸ್ವಾಮಿಯವರ ಭೂ ಒತ್ತುವರಿ ವರದಿ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೮ (೪೩೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಎ.ಟಿ.ರಾಮಸ್ವಾಮಿಯವರ ವರದಿಯಂತೆ ಒತ್ತುವರಿಯಾದ ಭೂ ವಿಸ್ತೀರ್ಣ ಎಷ್ಟು ಮತ್ತು ಯಾವ ಯಾವ ಸರ್ವೆ ನಂಬರ್‌ನಲ್ಲಿ ಎಷ್ಟು ಒತ್ತುವರಿಯಾಗಿದೆ;

(ಆ) ಕಳೆದ ಮೂರು ವರ್ಷಗಳಲ್ಲಿ ಒತ್ತುವರಿಯಾದ ಜಮೀನನ್ನು ಹಿಂಪಡೆದ ಪ್ರಕರಣಗಳು ಎಷ್ಟು (ಸರ್ವೆ ನಂಬರುವಾರು ಮತ್ತು ಒತ್ತುವರಿದಾರರ ಹೆಸರು, ವಿಳಾಸಗಳೊಂದಿಗೆ)?

## ಸರ್ಕಾರಿ ಜಮೀನಿನ ಒತ್ತುವರಿ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೯ (೪೩೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ಜಿಲ್ಲೆಯಲ್ಲಿ ಸರ್ಕಾರಿ ಜಮೀನು ಎಲ್ಲಿ ಮತ್ತು ಎಷ್ಟು ಒತ್ತುವರಿಯಾಗಿದೆ; ಕಳೆದ ೨ ವರ್ಷದ ವಿವರ ನೀಡುವುದು;

(ಆ) ಒತ್ತುವರಿಯಾದ ಸರ್ಕಾರಿ ಜಮೀನನ್ನು ಹಿಂದಕ್ಕೆ ಪಡೆದ ಜಮೀನಿನ ವಿಸ್ತೀರ್ಣ ಎಷ್ಟು; ಒತ್ತುವರಿ ಮಾಡಿಕೊಂಡಿದ್ದ ವ್ಯಕ್ತಿಗಳು ಯಾರು?



## ಕಬಿನಿ ಜಲಾಶಯದಿಂದ ಕೆರೆಗಳಿಗೆ ನೀರು ತುಂಬಿಸುವುದು

**ಶ್ರೀ ರಾಮಚಂದ್ರ ಗೌಡ (ಪದವೀಧರರ ಕ್ಷೇತ್ರ):–**

೨೪೦ (೪೩೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಾಮರಾಜನಗರ ಜಿಲ್ಲೆಯ ೨೦ ಕೆರೆಗಳಿಗೆ ಕಬಿನಿ ಜಲಾಶಯದಿಂದ ನೀರು ತುಂಬಿಸುವ ಯೋಜನೆ ಚಾಲ್ತಿಯಲ್ಲಿರುವುದು ನಿಜವೇ; ಹಾಗಿದ್ದಲ್ಲಿ, ಈ ಯೋಜನೆಗೆ ಅನುಮೋದನೆ ಸಿಕ್ಕಿದ್ದು ಯಾವಾಗ;

(ಆ) ಈ ಯೋಜನೆಯ ಪ್ರಯೋಜನಗಳೇನು; ಈ ಯೋಜನೆಗೆ ನಿಗದಿಪಡಿಸಿದ್ದ ಕಾಲಾವಧಿ ಏನು;

(ಇ) ಸದರಿ ಯೋಜನೆಯು ವಿಳಂಬವಾಗಿರುವುದು ನಿಜವೇ, ನಿಜವಾಗಿದ್ದಲ್ಲಿ ವಿವರ ನೀಡುವುದು ಮತ್ತು ಈ ವಿಳಂಬಕ್ಕೆ ಕಾರಣವೇನು;

(ಈ) ಈ ಯೋಜನೆ ಪೂರ್ಣಗೊಳ್ಳಲು ಬೇಕಾಗುವ ಕಾಲಾವಧಿಯೇನು?

## ಕೆರೆಗೆ ನೀರು ತುಂಬಿಸುವ ಯೋಜನೆ

**ಶ್ರೀ ರಾಮಚಂದ್ರ ಗೌಡ (ಪದವೀಧರರ ಕ್ಷೇತ್ರ):–**

೨೪೧ (೪೪೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) "ಕೆರೆಗೆ ನೀರು ತುಂಬಿಸುವ ಯೋಜನೆ" ಕುರಿತು ವಿವರ ನೀಡುವುದು;

(ಆ) ಈ ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾದ ಹಣ ಮತ್ತು ಪ್ರಗತಿ ಕುರಿತು ತಿಳಿಸುವುದು;

(ಇ) ಸದರಿ ಯೋಜನೆ ವಿಳಂಬವಾಗಿರುವುದು ನಿಜವೇ; ಹಾಗಿದ್ದಲ್ಲಿ ಕಾರಣಗಳೇನು;

(ಈ) ಚಾಮರಾಜನಗರ ಜಿಲ್ಲೆಯಲ್ಲಿ ಇನ್ನೂ ಯಾವ ಯಾವ ಕೆರೆಗಳಿಗೆ ನೀರು ತುಂಬಿಸಬೇಕಿದೆ; ಹಣ ಬಿಡುಗಡೆಯಾಗಿದ್ದರೂ ಇನ್ನೂ ಕಾಮಗಾರಿಗೆ ವಿನಿಯೋಗಿಸದಿರುವುದು ನಿಜವೇ;

(ಉ) ಹಾಗಿದ್ದಲ್ಲಿ ಕಾರಣವೇನು; ಇದಕ್ಕೆ ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು?

## ಮೂಲ ಸರ್ವೆ ದಾಖಲೆಗಳು

**ಶ್ರೀ ರಾಮಚಂದ್ರ ಗೌಡ (ಪದವೀಧರರ ಕ್ಷೇತ್ರ):–**

೨೪೨ (೪೪೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿಗೆ ಸೇರಿದ ಗ್ರಾಮಗಳ ಮೂಲ ಸರ್ವೆ ದಾಖಲೆಗಳು ನಾಶವಾಗಿರುವುದು ನಿಜವೇ;

(ಆ) ಈ ರೀತಿ ನಾಶವಾಗಲು ಕಾರಣಗಳೇನು; (ವಿವರ ನೀಡುವುದು)

(ಇ) ಇದನ್ನು ಕುರಿತು ತನಿಖೆ ನಡೆಸಲಾಗುತ್ತಿದೆಯೇ; ಇಲ್ಲವಾದಲ್ಲಿ ಕಾರಣವೇನು;

(ಈ) ಈ ರೀತಿ ನಾಶವಾದ ದಾಖಲೆಗಳನ್ನು ಮರು ಸಂಗ್ರಹಿಸಲು ಕ್ರಮಕೈಗೊಳ್ಳಲಾಗಿದೆಯೇ (ವಿವರ ನೀಡುವುದು)?

## ಗಣಕೀಕೃತ ಪಹಣಿಯಲ್ಲಿ ಜಮೀನಿನ ಸರಹದ್ದನ್ನು ಗುರುತಿಸುವುದು

**ಶ್ರೀ ರಾಮಚಂದ್ರ ಗೌಡ (ಪದವೀಧರರ ಕ್ಷೇತ್ರ):–**

೨೪೩ (೪೫೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರಿಗೆ ವಿತರಿಸುತ್ತಿರುವ ಗಣಕೀಕೃತ ಪಹಣಿಯಲ್ಲಿ ಅವರ ಜಮೀನಿನ ಸರಹದ್ದನ್ನು ಗುರುತಿನ ನೀಡುವ ಯೋಜನೆ ಬಗ್ಗೆ ಪ್ರಸ್ತಾಪಿಸಿದ್ದು ಯಾವಾಗ;



(ಆ) ಈ ಯೋಜನೆಯನ್ನು ಪ್ರಾಯೋಗಿಕವಾಗಿ ನಡೆಸಲಾಗಿದೆಯೇ;

(ಇ) ಹಾಗಿದ್ದಲ್ಲಿ, ಎಲ್ಲಿ ಯಾವಾಗ ನಡೆಸಲಾಗಿದೆ; ಪ್ರಾಯೋಗಿಕ ಯೋಜನೆ ಯಶಸ್ವಿಯಾಗಿದೆಯೇ; ಇಲ್ಲವಾದಲ್ಲಿ ಕಾರಣವೇನು;

(ಈ) ಈ ಯೋಜನೆಯನ್ನು ಜಾರಿಗೊಳಿಸುವ ಕುರಿತು ಸರ್ಕಾರದ ನಿಲುವೇನು (ವಿವರ ನೀಡುವುದು)?

## ಕೃಷಿ ಅರಣ್ಯ ಬೆಳೆಸುವುದು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೨೪೪ (೪೪೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾಮಾಜಿಕ ಅರಣ್ಯ ಇಲಾಖೆ ವತಿಯಿಂದ ಎನ್.ಆರ್.ಇ.ಜಿ.ಎ. ಯೋಜನೆಯಡಿ ರೈತರ ಜಮೀನಿನಲ್ಲಿ ಕೃಷಿ ಅರಣ್ಯ ಬೆಳೆಸುತ್ತಿದ್ದು ಸರ್ಕಾರವು ೨೦೧೩–೧೪ನೇ ಸಾಲಿನಲ್ಲಿ ತುಮಕೂರು ಹಾಗೂ ಎಲ್ಲಾ ಜಿಲ್ಲೆಗಳಲ್ಲಿ ರೈತರ ಜಮೀನಿನಲ್ಲಿ ೦.೭x೦.೭x೦.೭ ಮೀಟರ್ ಅಳತೆಯ ಗುಂಡಿಗಳಿಗೆ ರೂ.೮೯/– ನೀಡುತ್ತಿದ್ದು ೨೦೧೪–೧೫ನೇ ಸಾಲಿನಲ್ಲಿ ಅದೇ ಅಳತೆಯ ಗುಂಡಿಗಳಿಗೆ ರೂ.೪೯/– ನೀಡುತ್ತಿದ್ದು, ಯಾವ ಕಾರಣಕ್ಕೆ ರೈತರಿಗೆ ಈ ರೀತಿ ಅನ್ಯಾಯ ಮಾಡಲಾಗಿದೆ;

(ಆ) ೨೦೧೩–೧೪ ಮತ್ತು ೨೦೧೪–೧೫ ರಲ್ಲಿ ರೈತರು ಎಷ್ಟು ಸಸಿಗಳನ್ನು ಕೃಷಿ ಅರಣ್ಯ ಕಾಮಗಾರಿಯಡಿ ಬೆಳೆಸಿರುತ್ತಾರೆ; (ತಾಲ್ಲೂಕುವಾರು ಎರಡು ವರ್ಷಗಳ ಅಂಕಿ ಅಂಶಗಳನ್ನು ವಿವರ ನೀಡುವುದು)

(ಇ) ಕೇಂದ್ರ ಸರ್ಕಾರದಿಂದ ಅರಣ್ಯ ಇಲಾಖೆಗೆ ೨೦೧೪–೧೫ನೇ ಸಾಲಿನಲ್ಲಿ ಯಾವ ಯೋಜನೆಗಳಡಿ ಎಷ್ಟು ಅನುದಾನ ಬಂದಿರುತ್ತದೆ; (ವಿವರ ನೀಡುವುದು)

(ಈ) ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಡಿ ಬರುವ ನಿಗಮ, ಮಂಡಳಿ, ಪ್ರಾಧಿಕಾರ, ಉದ್ಯಮ ಮತ್ತು ಇತರೆ ಸಂಸ್ಥೆಗಳು ಯಾವುವು (ನಿಗಮಗಳ ಸ್ಥಾಪನೆ ಉದ್ದೇಶ, ಕೇಂದ್ರ ಕಛೇರಿ ಮತ್ತು ಅವುಗಳ ಯೋಜನೆ ಒಳಗೊಂಡಂತೆ ವಿವರವಾದ ಮಾಹಿತಿ ನೀಡುವುದು)?

## ಅಣೆಕಟ್ಟು ಮತ್ತು ನಿಗಮಗಳು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೨೪೫ (೪೪೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಯಾವ–ಯಾವ ನದಿಗಳಿಗೆ ಯಾವ–ಯಾವ ವರ್ಷಗಳಲ್ಲಿ ಮತ್ತು ಯಾವ ಸ್ಥಳಗಳಲ್ಲಿ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ; ನದಿಯ ಹೆಸರು, ವರ್ಷ, ಸ್ಥಳ ಮತ್ತು ನೀರನ್ನು ಸಂಗ್ರಹಿಸುವ ಸಾಮರ್ಥ್ಯ ಇವುಗಳನ್ನು ಒಳಗೊಂಡಂತೆ ಜಿಲ್ಲಾವಾರು ವಿವರ ನೀಡುವುದು;

(ಆ) ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಡಿ ಬರುವ ನಿಗಮ, ಮಂಡಳಿ, ಪ್ರಾಧಿಕಾರ, ಉದ್ಯಮ ಮತ್ತು ಇತರೆ ಸಂಸ್ಥೆಗಳು ಯಾವುವು (ನಿಗಮಗಳ ಸ್ಥಾಪನೆ ಉದ್ದೇಶ ಕೇಂದ್ರ ಕಛೇರಿ ಮತ್ತು ಅವುಗಳ ಯೋಜನೆ ಒಳಗೊಂಡಂತೆ ವಿವರವಾದ ಮಾಹಿತಿ ನೀಡುವುದು)?



## ಕಾರ್ಮಿಕ ಸವಲತ್ತು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೨೪೬ (೪೪೫) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರ್ಮಿಕ ಇಲಾಖೆಯಡಿ ಬರುವ ನಿಗಮ, ಮಂಡಳಿ, ಪ್ರಾಧಿಕಾರ, ಉದ್ಯಮ ಮತ್ತು ಇತರೆ ಸಂಸ್ಥೆಗಳು ಯಾವುವು; ನಿಗಮಗಳ ಸ್ಥಾಪನೆ ಉದ್ದೇಶ, ಕೇಂದ್ರ ಕಛೇರಿ ಮತ್ತು ಅವುಗಳ ಯೋಜನೆ ಒಳಗೊಂಡಂತೆ ವಿವರವಾದ ಮಾಹಿತಿ ನೀಡುವುದು;

(ಆ) ಕಟ್ಟಡ ಕಟ್ಟುವ ಕಾರ್ಮಿಕರಿಗೆ ಸರ್ಕಾರದಿಂದ ಸಿಗುತ್ತಿರುವ ಸವಲತ್ತುಗಳೇನು (ವಿವರ ನೀಡುವುದು)?

## ಗ್ರಾಮೀಣ ಕ್ರೀಡಾ ಅಭಿವೃದ್ಧಿ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೨೪೭ (೪೪೩) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣ ಕ್ರೀಡಾ ಸಬಲೀಕರಣಕ್ಕಾಗಿ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ; ಸಂಬಂಧ ಹಾಲಿ ಯಾವ ಯೋಜನೆಗಳು ಜಾರಿಯಲ್ಲಿವೆಯೇ; (ವಿವರ ನೀಡುವುದು)

(ಆ) ಜಿಲ್ಲಾ ಪ್ರಶಸ್ತಿ, ರಾಜ್ಯ ಪ್ರಶಸ್ತಿ, ರಾಷ್ಟ್ರ ಪ್ರಶಸ್ತಿ ಮತ್ತು ಅಂತರಾಷ್ಟ್ರೀಯ ಪ್ರಶಸ್ತಿ ಗೆದ್ದ ರಾಜ್ಯದ ಕ್ರೀಡಾ ಪಟುಗಳಿಗೆ ಮತ್ತು ಹೊರ ರಾಜ್ಯದ ಕ್ರೀಡಾ ಪಟುಗಳಿಗೆ ಸರ್ಕಾರದಿಂದ ನೀಡುವ ಸವಲತ್ತುಗಳೇನು; (ವಿವರ ನೀಡುವುದು)

(ಇ) ಜಿಲ್ಲಾ ಪ್ರಶಸ್ತಿ, ರಾಜ್ಯ ಪ್ರಶಸ್ತಿ ಮತ್ತು ರಾಷ್ಟ್ರ ಪ್ರಶಸ್ತಿ ಪಡೆದ ಕ್ರೀಡಾ ಪಟುಗಳಿಗೆ ರಾಜ್ಯ ಸರ್ಕಾರದ ನೇಮಕಾತಿಗಳಲ್ಲಿ ಕೊಡುವ ರಿಯಾಯಿತಿ ಏನು (ವಿವರ ನೀಡುವುದು)?

## ಬರ ಪೀಡಿತ ಪ್ರದೇಶಗಳು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೨೪೮ (೪೪೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಿನಾಂಕ ೨೦–೧೧–೨೦೧೪ ರವರೆಗೆ ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳನ್ನು "ಬರಪೀಡಿತ ತಾಲ್ಲೂಕು" ಎಂದು ಘೋಷಣೆ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಆ) ಸದರಿ ಬರಪೀಡಿತ ಪ್ರದೇಶಗಳ ಜನ, ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಮೇವಿಗೆ ಎಷ್ಟು ಹಣವನ್ನು ಯಾವ ಯಾವ ಯೋಜನೆಗಳಿಂದ ಬಿಡುಗಡೆಗೊಳಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಇ) ಸದರಿ ಬರಪೀಡಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರದಿಂದ ಅನುದಾನ ನೀಡಲಾಗಿದೆಯೇ; (ವಿವರ ನೀಡುವುದು)

(ಈ) ತಹಶೀಲ್ದಾರವರಿಗೆ ಆರ್.ಟಿ.ಸಿ. ತಿದ್ದುಪಡಿ ಅಧಿಕಾರವನ್ನು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ನೀಡಲಾಗಿದೆ; (ವಿವರ ನೀಡುವುದು)

(ಉ) ರಾಜ್ಯದಲ್ಲಿ ಎಷ್ಟು ಜನ ಗ್ರಾಮ ಸಹಾಯಕರು ಕೆಲಸ ನಿರ್ವಹಿಸುತ್ತಿದ್ದಾರೆ; (ಜಿಲ್ಲಾವಾರು ಸಂಖ್ಯೆ ನೀಡುವುದು) ಇವರಿಗೆ ನೀಡುತ್ತಿರುವ ಸಂಬಳ ಎಷ್ಟು; ಇವರನ್ನು ಗ್ರೂಪ್–ಡಿ ದರ್ಜೆ



ನೌಕರರನ್ನಾಗಿ ಪರಿಗಣಿಸಲಾಗಿದೆಯೇ; ಇಲ್ಲದಿದ್ದರೆ ಯಾವಾಗ ಪರಿಗಣಿಸಲಾಗುವುದು;

(ಊ) ರಾಜ್ಯದಲ್ಲಿ ರೆವಿನ್ಯೂ ಸರ್ವೆ ಕಾರ್ಯವು ಮೊಟ್ಟಮೊದಲಿಗೆ ಯಾವಾಗ ಪ್ರಾರಂಭವಾಯಿತು; ಯಾರು ಪ್ರಾರಂಭಿಸಿದರು; ಎಷ್ಟು ವರ್ಷಗಳ ಕಾಲ ನಡೆಯಿತು; (ವಿವರ ನೀಡುವುದು) ನಂತರ ರೀಸರ್ವೆ ಯಾವಾಗ ಮಾಡಿಸಲಾಯಿತು (ವಿವರ ನೀಡುವುದು)?

## ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೪೯ (೩೪೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಉಪನೋಂದಣಾಧಿಕಾರಿ, ಪ್ರಥಮ ದರ್ಜೆ ಸಹಾಯಕರು, ದ್ವಿತಿಯ ದರ್ಜೆ ಸಹಾಯಕರುಗಳಿಗೆ ಮುಂಬಡ್ತಿ ನೀಡಲು ಇರುವ ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು)

(ಆ) ಇಲಾಖೆಗೆ ಅನ್ಯ ಇಲಾಖೆಯಿಂದ ವೀಲಿನಗೊಂಡಿರುವ ಉಪನೋಂದಣಾಧಿಕಾರಿ, ಪ್ರಥಮ ದರ್ಜೆ ಸಹಾಯಕರು, ದ್ವಿತಿಯ ದರ್ಜೆ ಸಹಾಯಕರು ನೌಕರರುಗಳ ವಿವರ ನೀಡುವುದು;

(ಇ) ಇಲಾಖೆಗೆ ಅನ್ಯ ಇಲಾಖೆಯಿಂದ ನಿಯೋಜನೆ ಮೇಲೆ ಬಂದಿರುವ ಉಪನೋಂದಣಾಧಿಕಾರಿ, ಪ್ರಥಮ ದರ್ಜೆ ಸಹಾಯಕರು, ದ್ವಿತಿಯ ದರ್ಜೆ ಸಹಾಯಕರು ನೌಕರರ ವಿವರ ನೀಡುವುದು;

(ಈ) ಇವರುಗಳ ಜೇಷ್ಠತಾ ಪಟ್ಟಿಯನ್ನು ರಾಜ್ಯ ಮಟ್ಟದಲ್ಲಿ ಪ್ರಕಟಿಸಲಾಗುತ್ತದೆಯೇ (ಜೇಷ್ಠತಾ ಪಟ್ಟಿಯ ತಯಾರಿಸುವ ವಿವರ ನೀಡುವುದು)?

## ಕಂದಾಯ ಭೂಮಿಯನ್ನು ಅರಣ್ಯ ಭೂಮಿಯೆಂದು ಪರಿಗಣಿಸುತ್ತಿರುವುದು

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೫೦ (೩೪೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ರೈತರ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಯವರು ಡೀಮ್ಡ್ ಫಾರೆಸ್ಟ್ ಪಟ್ಟಿಗೆ ಸೇರಿಸಿ ರೈತರಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದರೆ, ಸರ್ಕಾರದಿಂದ ತೆಗೆದುಕೊಂಡಿರುವ ಕ್ರಮಗಳೇನು; ಡೀಮ್ಡ್ ಫಾರೆಸ್ಟ್‌ಗೆ ಸೇರಿಸಿರುವ ಭೂಮಿಗಳಾವುವು (ಸರ್ವೆ ನಂಬರ್‌ಗಳ, ತಾಲ್ಲೂಕುವಾರು ವಿವರಗಳನ್ನು ನೀಡುವುದು)?

## ಸಣ್ಣ ನೀರಾವರಿ ಕಾಮಗಾರಿಗಳು

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–**

೨೫೧ (೧೪೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೆಲಸ ನಿರ್ವಹಿಸುತ್ತಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು; (ಪ್ರತಿ ತಾಲ್ಲೂಕುವಾರು ವಿವರ ನೀಡುವುದು)



(ಆ) ಸದರಿ ಕೆರೆಗಳಿಗೆ ಬಿಡುಗಡೆ ಮಾಡಿರುವ ಮೊತ್ತದ ತಾಲ್ಲೂಕುವಾರು ವಿವರ ನೀಡುವುದು);

(ಇ) ಅವುಗಳಲ್ಲಿ ಎಷ್ಟು ಕೆರೆಗಳಲ್ಲಿ ಗುಣಮಟ್ಟದ ಕೆಲಸವಾಗಿರುತ್ತದೆ; ಕಳಪೆ ಮಟ್ಟದ ಕೆಲಸವಾಗಿರುವ ಕೆರೆಗಳ ಸಂಖ್ಯೆ ಎಷ್ಟು; ಕಳಪೆ ಕಾಮಗಾರಿ ನಿರ್ವಹಿಸಿದ ಯಾವ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)?

## ಕೆನರಾ ಅರಣ್ಯ ವೃತ್ತದಲ್ಲಿನ ಅವ್ಯವಹಾರಗಳು

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–**

೨೫೨ (೧೪೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅರಣ್ಯ ಇಲಾಖೆಯಲ್ಲಿ ಹಳಿಯಾಳ ವಿಭಾಗದ ಕೆನರಾ ವೃತ್ತದ ವಿಭಾಗೀಯ ಕಛೇರಿ ನವೀಕರಣಕ್ಕಾಗಿ ಖರ್ಚು ಮಾಡಿದ ಹಣವೆಷ್ಟು; ಯಾವ ವರ್ಷದ ಅವಧಿಗೆ ಅನುಮತಿ ನೀಡಿರುತ್ತಾರೆ; ನವೀಕರಣ ಕೆಲಸ ಮಂಜೂರಾತಿ ನೀಡಿದ ಅಧಿಕಾರಿ ಯಾರು; (ವಿವರಣೆಯೊಂದಿಗೆ)

(ಆ) ಸದರಿ ಕಛೇರಿ ನವೀಕರಣಕ್ಕಾಗಿ ಅಗತ್ಯಕ್ಕಿಂತ ಹೆಚ್ಚಿಗೆ ಅನುದಾನದ ಬಳಕೆ ಮಾಡಿಕೊಂಡಿರುತ್ತಾರೆಂದು ತಿಳಿದು ಬಂದಿದ್ದು, ಇದರ ತಪಾಸಣೆ ಮಾಡಿ ಎಂ.ಬಿ. ಬರೆದ ಅಧಿಕಾರಿ ಯಾರು; ಚೆಕ್ ಮೆಜರ್‌ಮೆಂಟ್ ವರದಿಯ ವಿವರ ನೀಡುವುದು; ಈ ಬಗ್ಗೆ ಸದರಿ ನವೀಕರಣದ ಅಂದಾಜು ಪತ್ರಿಕೆ ಹಾಗೂ ಎಮ್.ಬಿ. ವಿವರದ ಪ್ರತಿ ನೀಡುವುದು;

(ಇ) ೨೦೧೨-೧೩, ೨೦೧೩-೧೪ನೇ ಸಾಲಿನಲ್ಲಿ ಇದೇ ಕಾರ್ಯಾಲಯಕ್ಕೆ ಎಷ್ಟು ಲಕ್ಷ ರೂಪಾಯಿ ಅನುದಾನದ ಉಪಕರಣಗಳನ್ನು ಖರೀದಿಸಿರುತ್ತಾರೆ? (ಸದರಿ ಉಪಕರಣಗಳ ಖರೀದಿ ಮಾಡಿರುವುದರಲ್ಲಿಯೂ ಕೂಡಾ ಅವ್ಯವಹಾರ ಆಗಿರುವುದೆಂದು ತಿಳಿದು ಬಂದಿದ್ದು, ಉಪಕರಣಗಳ ಖರೀದಿಯ ಮಂಜೂರಾತಿ ಆದೇಶದ ಪ್ರತಿಯೊಂದಿಗೆ, ಸಂಪೂರ್ಣ ಉಪಕರಣಗಳ ಖರೀದಿಸಿದ ರಶೀದಿಯೊಂದಿಗೆ ವಿವರ ನೀಡುವುದು)?

## ಭಾರಿ ಮತ್ತು ಮಧ್ಯಮ ನೀರಾವರಿ ಜಲಾಶಯಗಳು

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–**

೨೫೩ (೧೪೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಗೆ ಸೇರಿದ ಜಲಾಶಯಗಳು ಎಲ್ಲೆಲ್ಲಿವೆ (ಹೆಸರು ಮತ್ತು ಆಳ/ಸುತ್ತಳತೆಯ ಪೂರ್ಣ ವಿವರ ನೀಡುವುದು);

(ಆ) ಈ ಅಣೆಕಟ್ಟುಗಳನ್ನು ನಿರ್ಮಿಸುವ ಸಂದರ್ಭದಲ್ಲಿ ಇವುಗಳ ನೀರು ಸಂಗ್ರಹದ ಸಾಮರ್ಥ್ಯವೆಷ್ಟಿತ್ತು; ಈಗ ಎಷ್ಟಿದೆ; ಜಲಾಶಯದಲ್ಲಿ ತುಂಬಿರುವ ಹೂಳಿನ ಪ್ರಮಾಣವೆಷ್ಟು (ಪ್ರತಿ ಜಲಾಶಯವಾರು ವಿವರಗಳನ್ನು ನೀಡುವುದು);

(ಇ) ಜಿಲ್ಲೆಯ ಎಲ್ಲಾ ಜಲಾಶಯಗಳಲ್ಲಿ ಅಪಾರ ಪ್ರಮಾಣದ ಹೂಳು ತುಂಬಿರುವುದರಿಂದ ನೀರಿನ ಸಂಗ್ರಹ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;



(ಈ) ಹಾಗಿದ್ದಲ್ಲಿ, ಜಲಾಶಯಗಳಲ್ಲಿ ಸಂಗ್ರಹವಾದ ಹೂಳನ್ನು ಎತ್ತಲು ಸರಕಾರ ಯೋಜನೆಯನ್ನೇನಾದರೂ ರೂಪಿಸಿದೆಯೇ; ಹೂಳನ್ನು ಎತ್ತಲು ಅಗತ್ಯವಿರುವ ಹಣದ ಮೊತ್ತವೆಷ್ಟು (ಮಾಹಿತಿ ನೀಡುವುದು);

(ಉ) ಕಳೆದ ೩ ವರ್ಷಗಳ ಅವಧಿಯಲ್ಲಿ ಈ ಜಲಾಶಯಗಳ ನಿರ್ವಹಣೆ ಮತ್ತು ಇತರೆ ಕಾಮಗಾರಿಗಳನ್ನು ಕೈಗೊಂಡಿದ್ದಕ್ಕೆ ಪ್ರತಿ ವರ್ಷ ವೆಚ್ಚ ಮಾಡಿರುವ ಹಣವೆಷ್ಟು; ಸದರಿ ಅವಧಿಯಲ್ಲಿ ಕೇಂದ್ರ/ ರಾಜ್ಯ ಸರ್ಕಾರದಿಂದ ಪ್ರತಿ ವರ್ಷ ನೀಡಲಾದ ಹಣವೆಷ್ಟು (ವರ್ಷವಾರು, ಜಿಲ್ಲಾವಾರು ಮಾಹಿತಿ ನೀಡುವುದು)?

## ಬಾಲ ಕಾರ್ಮಿಕರಿಗೆ ಶಿಕ್ಷಣದ ನೆರವು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೫೪ (೩೨೦) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ಬಾಲ ಕಾರ್ಮಿಕರನ್ನು ಗುರುತಿಸಲು ಇಲಾಖೆಯು ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ;

(ಆ) ಇಲ್ಲಿಯವರೆಗೆ ಎಷ್ಟು ಬಾಲ ಕಾರ್ಮಿಕರನ್ನು ಪತ್ತೆ ಮಾಡಲಾಗಿದೆ;

(ಇ) ಪತ್ತೆ ಮಾಡಲಾದ ಬಾಲ ಕಾರ್ಮಿಕರಿಗೆ ಸರ್ಕಾರದಿಂದ ನೆರವು ನೀಡಲಾಗುತ್ತಿದೆಯೇ;

(ಈ) ಬಾಲ ಕಾರ್ಮಿಕರಿಗೆ ನ್ಯಾಯ ದೊರಕಿಸಿ ಶಿಕ್ಷಣ ನೀಡಲು ಏನು ಕ್ರಮಗಳನ್ನು ಜಿಲ್ಲೆಯಲ್ಲಿ ಕೈಗೊಳ್ಳಲಾಗಿದೆ?

## ಉದ್ಯೋಗ ವಿನಿಮಯ ಕಛೇರಿಯಿಂದ ಉದ್ಯೋಗವಕಾಶಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೫೫ (೩೨೧) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ನೋಂದಣಿ ಇಲಾಖೆಯ ಕಾರ್ಯಕ್ರಮಗಳೇನು;

(ಆ) ಇಲಾಖೆಯಲ್ಲಿ ಸದ್ಯ ಉದ್ಯೋಗವಕಾಶ ಕೋರಿ ನೋಂದಣಿ ಕಾರ್ಯ ಪ್ರಗತಿಯಲ್ಲಿದೆಯೇ;

(ಇ) ಇದ್ದಲ್ಲಿ, ೨೦೦೫ ರಿಂದ ಇಲ್ಲಿಯವರೆಗೂ ಸ್ವೀಕೃತವಾದ ನೋಂದಣಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಈ) ಇಲ್ಲದಿದ್ದಲ್ಲಿ ಕಾರಣಗಳೇನು;

(ಉ) ಕೊಪ್ಪಳ ಜಿಲ್ಲೆಯಲ್ಲಿರುವ ಸದರಿ ಕಛೇರಿಯಲ್ಲಿ ಮಂಜೂರಾದ ವಿವಿಧ ಹುದ್ದೆಗಳು ಎಷ್ಟು; ಸದ್ಯ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ ಹುದ್ದೆಗಳು ಎಷ್ಟು; ಖಾಲಿ ಇರುವ ಹುದ್ದೆಗಳ ವಿವರಗಳನ್ನು ನೀಡುವುದು;

(ಊ) ಖಾಲಿ ಹುದ್ದೆಗಳ ಭರ್ತಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು;

(ಋ) ಉದ್ಯೋಗ ವಿನಿಮಯ ನೋಂದಣಿ ಇಲಾಖೆಯನ್ನು ಉನ್ನತೀಕರಿಸಲು ಸರ್ಕಾರ ಕೈಗೊಂಡ ಕಾರ್ಯತಂತ್ರಗಳಾವುವು (ವಿವರಗಳನ್ನು ನೀಡುವುದು)?



## ಭಾರಿ ಮತ್ತು ಮಧ್ಯಮ ನೀರಾವರಿ ಕಾಮಗಾರಿಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೫೬ (೩೨೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ಭಾರೀ ಮತ್ತು ಮಧ್ಯಮ ನೀರಾವರಿ ಇಲಾಖೆಯಿಂದ ಕೈಗೊಂಡ ಕಾಮಗಾರಿಗಳೆಷ್ಟು; (ಕಾಮಗಾರಿವಾರು ಮಾಹಿತಿ ನೀಡುವುದು)

(ಆ) ಕೈಗೊಂಡ ಕಾಮಗಾರಿಗಳಿಂದ ಜಿಲ್ಲೆಯಲ್ಲಿ ಎಷ್ಟು ಭೂಮಿ ನೀರಾವರಿಗೆ ಒಳಪಡುತ್ತದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಸದರಿ ಯೋಜನೆಗಳಿಗೆ ಸರ್ಕಾರ ಈಗಾಗಲೇ ಎಷ್ಟು ಹಣವನ್ನು ಮಂಜೂರು ಮಾಡಿದೆ; ಮಂಜೂರಾದ ಹಣದಲ್ಲಿ ಕಾಮಗಾರಿಗಳಿಗಾಗಿ ಎಷ್ಟು ಹಣ ಖರ್ಚಾಗಿರುತ್ತದೆ;

(ಈ) ಸದ್ಯ ಕಾಮಗಾರಿಗಳು ಯಾವ ಹಂತದಲ್ಲಿ ಇವೆ (ಮಾಹಿತಿ ನೀಡುವುದು)?

## ಅರಣ್ಯ ಅಭಿವೃದ್ಧಿ ಕಾಮಗಾರಿಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೫೭ (೩೨೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩ನೇ ಸಾಲಿನಿಂದ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಅರಣ್ಯ ಇಲಾಖೆ ವತಿಯಿಂದ ಯಾವ ಯಾವ ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ;

(ಆ) ಜಿಲ್ಲೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಮಂಜೂರಾದ ಅನುದಾನವೆಷ್ಟು; ಇಲ್ಲಿಯವರೆಗೆ ಬಳಕೆ ಮಾಡಿದ ಅನುದಾನದ ಬಗ್ಗೆ ವಿವರ ನೀಡುವುದು;

(ಇ) ಈ ಎರಡು ಜಿಲ್ಲೆಗಳಲ್ಲಿ ಅರಣ್ಯ ಭೂಮಿಯನ್ನು ಒತ್ತಿವರಿ ಮಾಡಿದ ಪ್ರಕರಣಗಳು ಪತ್ತೆಯಾಗಿವೆಯೇ; ಪತ್ತೆಯಾದಲ್ಲಿ ವಿವರಗಳನ್ನು ನೀಡುವುದು;

(ಈ) ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿದವರ ವಿರುದ್ಧ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ (ವಿವರ ನೀಡುವುದು)?

**ವಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ–2, ಬೆಂಗಳೂರು–59/ಕಾ.ಸೂ. 0 3457/ 1500 ಪ್ರತಿಗಳು/5–12–14